ಸಂಪುಟ : 10 ಸಂಚಿಕೆ: 190 ಪುಟ : 4+2 ಬೆಲೆ: 3.00 ಶುಕ್ರವಾರ ಸೆಪ್ಟೆಂಬರ್ 05 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 190 Pages : 4+2 Price : 3.00 Friday September 05 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿವಿಧ ಯೋಜನೆಗಳಿಗೆ ಒಪ್ಪಿಗೆ

## ಎಲ್ಲಾ ಜಿಲ್ಲೆಗಳಲ್ಲಿ 'ಆಶಾಕಿರಣ' ಜಾರಿ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ 'ಆಶಾಕಿರಣ' ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 52.85 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಗುರುವಾರ ನಡೆದ ಸಭೆಯಲ್ಲಿ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ 107 ಕೆರೆಗಳಿಗೆ ಬೇಡ್ತಿ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಯೋಜನೆಯನ್ನು 179.50 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.



ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ರಾಜ್ಯದ ವಿವಿಧ 22 ವಿಧಾನಸಭಾ ಕ್ಷೇತ್ರಗಳಲ್ಲಿ (40 ಕಾಮಗಾರಿಗಳು) ಅಲ್ಪಸಂಖ್ಯಾತರು ವಾಸಿಸುತ್ತಿರುವ ನಗರ ಪ್ರದೇಶಗಳಲ್ಲಿನ ಅತೀ ಹಿಂದುಳಿದ ಕಾಲೋನಿಗಳನ್ನು ಮಾದರಿ ಕಾಲೋನಿಗಳನ್ನಾಗಿ ಅಭಿವೃದ್ಧಿಪಡಿಸಲು 2024-25ರಲ್ಲಿ ಬಿಡುಗಡೆ ಮಾಡಲಾದ ರೂ. 160 ಕೋಟಿಗಳನ್ನು ಒಳಗೊಂಡಂತೆ ಒಟ್ಟು ರೂ. 398 ಕೋಟಿಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಣಯಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಡಿಯಲ್ಲಿರುವ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಅನುಸರಣೀಯ ಆಸ್ಪತ್ರೆ ನಿರ್ವಹಣಾ ವ್ಯವಸ್ಥೆ ತಂತ್ರಾಂಶದ ಹಂತವಾರು ಅನುಷ್ಠಾನಕ್ಕಾಗಿ ತಾತ್ವಿಕ ಅನುಮೋದನೆ ಸಿಕ್ಕಿದೆ.

ಭಾರತ ಸರ್ಕಾರದ CTRAV ಯೋಜನೆ, 2025 ಅಡಿಯಲ್ಲಿ (ಪ್ರತಿ ಫಲಾನುಭವಿಗೆ ರೂ.1.5 ಲಕ್ಷ ಸಹಾಯ), ರಾಜ್ಯ ಸರ್ಕಾರದಿಂದ ಹೆಚ್ಚುವರಿ (ಟಾಪ್-ಅಪ್) ರೂಪದಲ್ಲಿ ಪ್ರತಿ ಫಲಾನುಭವಿಗೆ ರೂ.1 ಲಕ್ಷ ನೆರವು ಒದಗಿಸುವ ಪ್ರಸ್ತಾವನೆಯಿದ್ದು, ಇದಕ್ಕಾಗಿ ಈಗಿರುವ ರಾಜ್ಯ ಅಪಘಾತ ಪೀಡಿತರ ಯೋಜನೆಗೆ ತಿದ್ದುಪಡಿ ಮಾಡುವುದನ್ನು ಹಾಗೂ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಿಲ್ಲದ ಪ್ರಸ್ತಾವನೆಗೆ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಡಿ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ 20 ವಿದ್ಯಾರ್ಥಿ ನಿಲಯಗಳನ್ನು ರಾಜ್ಯದ 14 ಜಿಲ್ಲೆಗಳಲ್ಲಿ ರೂ.15.45 ಕೋಟಿಗಳ ಮೊತ್ತದಲ್ಲಿ ಹೊಸದಾಗಿ ಪ್ರಾರಂಭಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

### 60 ಪ್ರಕರಣಗಳು ವಾಪಸ್

ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ಅವರು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2019ರಿಂದ 2023ರವರೆಗೆ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತಾಗಿ ತನಿಖೆ ಮಾಡಿ ವರದಿಯನ್ನು ಸಲ್ಲಿಸಿದ್ದಾರೆ. ಈ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದು. ರೈತರು, ವಿದ್ಯಾರ್ಥಿಗಳು, ಕನ್ನಡ ಹೋರಾಟಗಾರರ ಮೇಲಿದ್ದ 60 ಪ್ರಕರಣಗಳನ್ನು ಸರ್ಕಾರ ಹಿಂಪಡೆದಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಸಭೆಯಲ್ಲಿ ತಿಳಿಸಿದರು.

## ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇನ್ಮುಂದೆ ಬ್ಯಾಲೆಟ್ ಪೇಪರ್ ಬಳಕೆ; ಸಚಿವ ಹೆಚ್ ಕೆ ಪಾಟೀಲ್

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಳೆದ ಕೆಲವು ದಿನಗಳ ಹಿಂದೆ ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಮತಗಳ್ಳತನ ಆರೋಪ ಮಾಡಿದ್ದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕ ಹಾಗೂ ಬಿಹಾರದಲ್ಲಿ ಮತಗಳ್ಳತನ ನಡೆದಿತ್ತು ಎಂದು ಇವಿಎಂ ಮೇಲೆ ಶಂಕೆ ವ್ಯಕ್ತಪಡಿಸಿ ಪ್ರತಿಭಟನೆ ಕೂಡ ಮಾಡಿದ್ದರು. ಇದೆಲ್ಲದರ ಬೆಳವಣಿಗೆ ಹಿನ್ನೆಲೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟದಲ್ಲಿ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.



ಎಸ್, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇಗಿಒ ಬದಲು ಬ್ಯಾಲೆಟ್ ಪೇಪರ್ ಬಳಕೆಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಮಾಡಲಾಗಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಖಾತೆ ಸಚಿವ ಹೆಚ್.ಕೆ ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಸಚಿವ ಹೆಚ್. ಕೆ ಪಾಟೀಲ್, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂ ಬದಲು ಬ್ಯಾಲೆಟ್ ಪೇಪರ್ ಬಳಸಲು ನಿರ್ಧರಿಸಲಾಗಿದೆ. ಈ ಕುರಿತು ಅನುಮೋದನೆ ನೀಡಲಾಗಿದೆ ಎಂದರು.

ಇತ್ತೀಚಿಗೆ ಮತದಾರರ ಪಟ್ಟಿ ತಯಾರಿಕೆಯಲ್ಲಿ ಬದಲಾವಣೆಯಾಗುತ್ತಿದೆ. ದೊಡ್ಡ ಪ್ರಮಾಣದಲ್ಲಿ ಇಲ್ಲದವರ ಹೆಸರು ಸೇರಿಸಲಾಗಿದೆ. ಮತಗಳ್ಳತನ ಚರ್ಚೆ ನಡೆದಿದೆ.

ಇವಿಎಂ ಬಗ್ಗೆ ಜನರಲ್ಲಿ ವಿಶ್ವಾಸಾರ್ಹತೆ ಕಡಿಮೆ ಆಗುತ್ತಿದೆ. ಹೀಗಾಗಿ ಇವಿಎಂ ಬದಲಾಗಿ ಬ್ಯಾಲೆಟ್ ಪೇಪರ್ ಬಳಕೆಗೆ ತೀರ್ಮಾನಿಸಲಾಗಿದೆ ಎಂದು ಹೆಚ್ ಕೆ ಪಾಟೀಲ್ ತಿಳಿಸಿದರು.

## ಈದ್ ಮಿಲಾದ್; ಇಂದು ಮದ್ಯ ಮಾರಾಟ, ಸಾಗಾಟ ನಿಷೇಧ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಾದ್ಯಂತ ಸೆಪ್ಟೆಂಬರ್ 5 ರಂದು ಈದ್ ಮಿಲಾದ್ ಹಬ್ಬದ ಅಂಗವಾಗಿ ಮೆರವಣಿಗೆ ಹಾಗೂ ಸಮಾರಂಭಗಳು ಜರುಗುತ್ತಿದ್ದು, ಆ ಕಾಲಕ್ಕೆ ಜಿಲ್ಲೆಯಾದ್ಯಂತ ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯಾದ್ಯಂತ ಸೆಪ್ಟೆಂಬರ್ 5 ರಂದು ಬೆಳಿಗ್ಗೆ 6 ಗಂಟೆಯಿಂದ ಮಧ್ಯರಾತ್ರಿಯವರೆಗೆ ಮದ್ಯ ಮಾರಾಟ ಮತ್ತು ಸಾಗಾಟ ನಿಷೇಧಿಸಲಾಗಿದೆ. ಹೀಗಾಗಿ


ಗದಗ ಜಿಲ್ಲೆಯ ಬಾರ್‌ಗಳು, ಕ್ಲಬ್‌ಗಳು, ಬಿಯರ್, ಭಾರತೀಯ ತಯಾರಿಕೆಯ ಮದ್ಯದ ಅಂಗಡಿಗಳನ್ನು ಮೇಲ್ಕಾಣಿಸಿದ ಅವಧಿಯಲ್ಲಿ ಮುಚ್ಚತಕ್ಕದ್ದು.

ಅಲ್ಲದೇ ಪರಿಸ್ಥಿತಿಗೆ ಅನುಗುಣವಾಗಿ ಸಾರ್ವಜನಿಕ ಶಾಂತತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ವಲಯ ಅಬಕಾರಿ ಇನ್ಸ್‌ಪೆಕ್ಟರ್ ಹಾಗೂ ಅಬಕಾರಿ ಉಪ-ಆಯುಕ್ತರು, ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಎಸ್ ಟಿ ಸರಳೀಕರಣ- ಗ್ರಾಹಕ ಸ್ನೇಹಿ ತೀರ್ಮಾನ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಜಿಎಸ್ ಟಿ ಸರಳೀಕರಣ ಬಡವರ ಪರ, ಸಾಮಾನ್ಯ ಜನರ ಪರ ಗ್ರಾಹಕ ಸ್ನೇಹಿ ತೀರ್ಮಾನವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.



ಈ ಕುರಿತು ಎಕ್ಸ್ ಮಾಡಿರುವ ಅವರು, ಇದರಿಂದ ವ್ಯಾಪಾರ ವಹಿವಾಟು ಹೆಚ್ಚಳವಾಗಲಿದ್ದು ದೇಶದ ಆರ್ಥಿಕತೆಯನ್ನು ಬಲಗೊಳಿಸುತ್ತದೆ. ಇದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತೆಗೆದುಕೊಂಡಿರುವ ಅತ್ಯಂತ ದಿಟ್ಟ ನಿರ್ಧಾರವಾಗಿದೆ. ಅವರ ಕನಸಿನ ಆತ್ಮನಿರ್ಭರ ಹಾಗೂ ವಿಕಸಿತ ಭಾರತ ನಿರ್ಮಾಣಕ್ಕೆ ಇದು ಪೂರಕವಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರಗಳು ಬಡವರ ಹಾಗೂ ಸಾಮಾನ್ಯ ಜನರ ಕಲ್ಯಾಣಕ್ಕಾಗಿ ಸಹಕಾರ ನೀಡಬೇಕು. ಅನೇಕ ರಾಜ್ಯಗಳು ಜಿಎಸ್ ಟಿ ಕಡಿತಕ್ಕೆ ಆಗ್ರಹಿಸುತ್ತಿದ್ದವು. ಆದರೆ, ತಮ್ಮ ಪಾಲಿನ ಆದಾಯ ಬಿಟ್ಟು ಕೊಡಲು ಒಪ್ಪುತ್ತಿಲ್ಲ ಎಂದು ಬೊಮ್ಮಾಯಿ ತಿಳಿಸಿದ್ದಾರೆ.


## ಟ್ರಾಫಿಕ್ ಫೈನ್ 50% ಡಿಸ್ಕೌಂಟ್; ಬರೀ 13 ದಿನದಲ್ಲಿ ಸಂಗ್ರಹವಾದ ದಂಡ ಎಷ್ಟು ಗೊತ್ತಾ?

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರು ಸಂಚಾರ ಪೊಲೀಸರಿಂದ ಟ್ರಾಫಿಕ್ ದಂಡದ ಮೇಲೆ ಶೇಕಡಾ 50 ರಷ್ಟು ರಿಯಾಯಿತಿ ಘೋಷಣೆಗೆ ವಾಹನ ಸವಾರರಿಂದ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಆಗಸ್ಟ್ 23ರಿಂದ ಸೆಪ್ಟೆಂಬರ್ 12, 2025ರವರೆಗೆ ಈ ಯೋಜನೆ ಜಾರಿಯಲ್ಲಿದ್ದು, ಈ ಅವಧಿಯಲ್ಲಿ ವಾಹನ ಮಾಲೀಕರು ತಮ್ಮ ಬಾಕಿ ದಂಡವನ್ನು ಅರ್ಧದಷ್ಟು ಮೊತ್ತದಲ್ಲಿ ಪಾವತಿಸಬಹುದಾಗಿದೆ. ಕೇವಲ 13 ದಿನಗಳಲ್ಲಿ 12,70,000ಕ್ಕೂ ಹೆಚ್ಚು ಟ್ರಾಫಿಕ್ ಉಲ್ಲಂಘನೆ ಪ್ರಕರಣಗಳು ಇತ್ಯರ್ಥಗೊಂಡಿವೆ.

ಈ ಮೂಲಕ ಬರೋಬ್ಬರಿ 35 ಕೋಟಿ 73 ಲಕ್ಷ ರೂಪಾಯಿಗಳ ದಂಡ ಸಂಗ್ರಹವಾಗಿದೆ. ಆಗಸ್ಟ್ 23ರಿಂದ ಆಗಸ್ಟ್ 28ರವರೆಗಿನ ಆರು ದಿನಗಳಲ್ಲಿ 18.95 ಕೋಟಿ ಸಂಗ್ರಹವಾಗಿತ್ತು,



## ಸಂಪಾದಕೀಯ

# ಜಿಎಸ್‌ಟಿ ದರ ಇಳಿಕೆ: ಜನಸಾಮಾನ್ಯರಿಗೆ ಸಿಹಿ ಸುದ್ದಿ

ಇತ್ತೀಚೆಗೆ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳು ದೇಶದ ಆರ್ಥಿಕತೆಗೆ ಹಾಗೂ ಜನಸಾಮಾನ್ಯರಿಗೆ ಹೊಸ ಭರವಸೆ ಮೂಡಿಸಿವೆ. ಔಷಧಿಗಳು, ಆಟೋಮೊಬೈಲ್ ಬಿಡಿಭಾಗಗಳು ಸೇರಿದಂತೆ ಅನೇಕ ದೈನಂದಿನ ಬಳಕೆಯ ವಸ್ತುಗಳ ಮೇಲಿನ ತೆರಿಗೆ ದರವನ್ನು ಇಳಿಕೆ ಮಾಡಿದ್ದು, ಇದು ಮಧ್ಯಮ ವರ್ಗದ ಕುಟುಂಬಗಳಿಗೆ ದೊಡ್ಡ ಮಟ್ಟದ ಪರಿಹಾರ ನೀಡಲಿದೆ.

ಹಣದುಬ್ಬರ ಏರುತ್ತಿರುವ ಈ ಸಮಯದಲ್ಲಿ, ಸಾಮಾನ್ಯ ಜನರು ತಮ್ಮ ದಿನನಿತ್ಯದ ಖರ್ಚುಗಳನ್ನು ನಿಭಾಯಿಸಲು ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಇಳಿಕೆ ನಿರ್ಧಾರವು ನೇರವಾಗಿ ಬೆಲೆಗಳ ಕಡಿತಕ್ಕೆ ಕಾರಣವಾಗುತ್ತದೆ. ಇದರಿಂದಾಗಿ ಗ್ರಾಹಕರ ಕೊಳ್ಳುವ ಸಾಮರ್ಥ್ಯ ಹೆಚ್ಚಾಗುವುದಲ್ಲದೆ, ಉಳಿತಾಯಕ್ಕೂ ಅವಕಾಶ ಸಿಗುತ್ತದೆ. ಇದು ದೇಶೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಿ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲಿದೆ.

ಆದರೆ, ಕೇವಲ ದರ ಕಡಿತ ಘೋಷಿಸಿದರೆ ಸಾಲದು. ಸರ್ಕಾರದ ಈ ನಿರ್ಧಾರದ ನೈಜ ಲಾಭಗಳು ನೇರವಾಗಿ ಗ್ರಾಹಕರನ್ನು ತಲುಪುವಂತೆ ನೋಡಿಕೊಳ್ಳುವುದು ಮುಖ್ಯ. ವ್ಯಾಪಾರಸ್ಥರು ಮತ್ತು ಕಂಪನಿಗಳು ತೆರಿಗೆ ಇಳಿಕೆಯ ಲಾಭವನ್ನು ತಾವೇ ಇಟ್ಟುಕೊಳ್ಳದೆ, ಅದರ ಸಂಪೂರ್ಣ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಬೇಕು. ಇದನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಕಟ್ಟುನಿಟ್ಟಿನ ಮೇಲ್ವಿಚಾರಣೆ ನಡೆಸಬೇಕು.

ಇದು ಒಂದು ಉತ್ತಮ ಆರಂಭ. ಜಿಎಸ್‌ಟಿ ವ್ಯವಸ್ಥೆಯಲ್ಲಿ ಇನ್ನೂ ಸರಳೀಕರಣದ ಅಗತ್ಯವಿದೆ. ಆದರೆ, ಸದ್ಯದ ಈ ದರ ಇಳಿಕೆಯ ನಿರ್ಧಾರವು ಜನಸಾಮಾನ್ಯರ ಜೀವನವನ್ನು ಸುಲಭಗೊಳಿಸುವತ್ತ ಒಂದು ಮಹತ್ವದ ಹೆಜ್ಜೆಯಾಗಿದೆ. ಈ ಕ್ರಮವು ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಮತ್ತು ಜನರಿಗೆ ಇನ್ನಷ್ಟು ಆರ್ಥಿಕ ಶಕ್ತಿ ತುಂಬಲು ಸಹಾಯಕವಾಗಲಿದೆ ಎಂದು ನಿರೀಕ್ಷಿಸಬಹುದು.

### ಶಿಕ್ಷಕರನ್ನು ಗೌರವಿಸುವ ಸಮಾಜವೇ ನಿಜವಾದ ಅರ್ಥದಲ್ಲಿ ಜ್ಞಾನ ಸಮಾಜ

# 'ಗುರು' ಬೆಳಗಿದಾಗ ರಾಷ್ಟ್ರ ಬೆಳೆಯುತ್ತದೆ

'ಗುರುವಿನ ಸ್ಥಾನ ದೇವರಿಗಿಂತಲೂ ಶ್ರೇಷ್ಠ' ಎಂಬ ಮಾತು ನಮ್ಮ ಸಂಸ್ಕೃತಿಯ ದಿಕ್ಕು ತೋರುವ ಮಂತ್ರವಾಗಿದೆ. ಇತಿಹಾಸದಿಂದ ಇಂದಿನವರೆಗೂ, ಶಿಕ್ಷಕರು ಸಮಾಜದ ಬೌದ್ಧಿಕ ನಿರ್ಮಾತೃಗಳು, ನೈತಿಕ ಮಾರ್ಗದರ್ಶಕರು, ಭವಿಷ್ಯದ ಶಿಲ್ಪಿಗಳು. ಆದರೆ ಇಂದಿನ ಸಮಾಜದಲ್ಲಿ ಅವರ ಸ್ಥಾನ, ಗೌರವ, ಸವಾಲುಗಳು ಮತ್ತು ಭವಿಷ್ಯದ ಬದಲಾವಣೆಗಳ ಕುರಿತಂತೆ ಗಂಭೀರ ವಿಶ್ಲೇಷಣೆ ನಡೆಸುವುದು ಅಗತ್ಯವಾಗಿದೆ.




ಶಿಕ್ಷಕರ ಕೆಲಸ ಕೇವಲ ಪಾಠಪುಸ್ತಕಗಳನ್ನು ಓದಿಸುವುದು ಅಥವಾ ಪರೀಕ್ಷೆಗಳಿಗೆ ಮಕ್ಕಳನ್ನು ಅಣಿಯಾಗಿಸುವುದಷ್ಟೇ ಅಲ್ಲ. ಅವರು ವಿದ್ಯಾರ್ಥಿಗಳ ವ್ಯಕ್ತಿತ್ವ, ಚಿಂತನೆ, ಶಿಸ್ತಿನ ನಿಲುವು, ಮೌಲ್ಯಗಳ ನಿರ್ಮಾಣ ಹಾಗೂ ಜೀವನ ಕೌಶಲ್ಯಗಳ ಅಭಿವೃದ್ಧಿಗೆ ಕಾರಣರಾಗುತ್ತಾರೆ. ಒಬ್ಬ ಒಳ್ಳೆಯ ಶಿಕ್ಷಕ ಸಮಾಜದಲ್ಲಿ ನೂರಾರು ಉತ್ತಮ ವೈದ್ಯರನ್ನು, ವಕೀಲರನ್ನು, ವಿಜ್ಞಾನಿಗಳನ್ನು, ಕವಿಗಳನ್ನು, ತತ್ವಜ್ಞಾನಿಗಳನ್ನು ಬೆಳೆಸಬಹುದು.

ವೇದಕಾಲದಿಂದಲೇ 'ಗುರುಕುಲ' ಪದ್ಧತಿ ಭಾರತದಲ್ಲಿ ಅಸ್ತಿತ್ವದಲ್ಲಿತ್ತು. ಅಲ್ಲಿ ಶಿಕ್ಷಕರನ್ನು 'ಆಚಾರ್ಯ' ಎಂದು ಕರೆಯಲಾಗುತ್ತಿತ್ತು. ಆಚಾರ್ಯರು ವಿದ್ಯಾರ್ಥಿಗಳಿಗೆ ಜ್ಞಾನ ಮಾತ್ರವಲ್ಲ, ಧರ್ಮ, ಕರ್ತವ್ಯ, ಸಮಾಜ ಸೇವೆಯ ದಾರಿಯನ್ನೂ ತೋರಿಸುತ್ತಿದ್ದರು. ಆದರೆ ಆ ಪಾರಂಪರ್ಯ ನಿಧಾನವಾಗಿ ಕುಗ್ಗಿ, ಶಿಕ್ಷಕರು ಇಂದು ಉದ್ಯೋಗದ ಕೇವಲ ಒಂದು ಅಂಶವಾಗಿ ಕಾಣಲ್ಪಡುವ ಹಂತಕ್ಕೆ ತಲುಪಿದ್ದಾರೆ.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ಪಾತ್ರ ಬಹುಮುಖವಾಗಿದೆ. ಅವರು ತಂತ್ರಜ್ಞಾನ ಬಳಸಿ ಪಾಠ ಹೇಳಬೇಕಾಗಿದೆ, ಮಕ್ಕಳ ಮನೋವಿಜ್ಞಾನ ತಿಳಿದು ನಡೆದುಕೊಳ್ಳಬೇಕಾಗಿದೆ, ಪಾಲಕರ ನಿರೀಕ್ಷೆಗಳನ್ನು ಪೂರೈಸಬೇಕಾಗಿದೆ. ಜೊತೆ- ಗೆ ಸರ್ಕಾರದ ಆಡಳಿತಾತ್ಮಕ ಹೊರೆ, ಅಂಕಪಟ್ಟಿ, ವರದಿ, ಚುನಾವಣಾ ಕರ್ತವ್ಯ, ಜನಗಣತಿ ಮುಂತಾದ ಕಾರ್ಯಗಳು ಶಿಕ್ಷಕರ ಮೇಲೆ ಹೆಚ್ಚುತ್ತಿರುವುದು, ಅವರ ಮೂಲ ಕರ್ತವ್ಯವಾದ ಬೋಧನೆಯನ್ನು ಬದಿಗಿಟ್ಟುಬಿಟ್ಟಿದೆ.

ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರಿಗೆ ಮೂಲಭೂತ ಸೌಕರ್ಯಗಳ ಕೊರತೆ, ಶಾಲಾ ಕಟ್ಟಡದ ದುಃಸ್ಥಿತಿ, ಮಕ್ಕಳ ಅಸ್ಥಿರ ಹಾಜರಾತಿ ಇವುಗಳು ಅವರ ಕೆಲಸವನ್ನು ಇನ್ನಷ್ಟು ಕಷ್ಟಮಾಡುತ್ತಿವೆ. ಒಂದೆಡೆ, ಸಮಾಜದಲ್ಲಿ 'ಗುರು' ಎಂಬ ಪದ ಇನ್ನೂ ಗೌರವದಿಂದ ಬಳಕೆಯಾಗುತ್ತದೆ. ಆದರೆ ನೈಜ ಜೀವನದಲ್ಲಿ ಶಿಕ್ಷಕರನ್ನು ವೈದ್ಯರು, ಇಂಜಿನಿಯರು, ಸರ್ಕಾರಿ ಅಧಿಕಾರಿಗಳಷ್ಟೇ ಗೌರವಿಸುವ ದೃಷ್ಟಿ ಕಡಿಮೆಯಾಗುತ್ತಿದೆ.

ಇಂದಿನ ಮಕ್ಕಳು ತಂತ್ರಜ್ಞಾನ ಜಗತ್ತಿನಲ್ಲಿ ಬೆಳೆದವರು. ಮೊಬೈಲ್, ಇಂಟರ್ನೆಟ್, ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಅವರ ಚಿಂತನೆ, ಗಮನ, ಶಿಸ್ತಿನಲ್ಲಿ ಬದಲಾವಣೆ ಉಂಟಾಗಿದೆ. ಇಂತಹ ವಿದ್ಯಾರ್ಥಿಗಳಿಗೆ ಬೋಧಿಸುವುದು ಶಿಕ್ಷಕರಿಗೆ ಸುಲಭವಾದುದಲ್ಲ. ಅವರು ಪಾಠದೊಂದಿಗೆ ಪ್ರೇರಣೆ, ಮಾರ್ಗದರ್ಶನ, ಮಾನಸಿಕ ಸಮತೋಲನ ನೀಡಬೇಕಾಗಿದೆ.

ಶಿಕ್ಷಣದ ಗುಣಮಟ್ಟವನ್ನು ಏರಿಸುವಲ್ಲಿ ಶಿಕ್ಷಕರ ಪಾತ್ರ ನಿರ್ಣಾಯಕ. ಪಠ್ಯಕ್ರಮ, ಪುಸ್ತಕ, ನೀತಿ ಎಲ್ಲವೂ ರೂಪುರೇಷೆ ನೀಡಬಹುದು. ಆದರೆ ಆ ಜ್ಞಾನವನ್ನು ಜೀವಂತಗೊಳಿಸುವುದು ಶಿಕ್ಷಕರ ಬೋಧನಾ ಶೈಲಿ. ಒಬ್ಬ ಪ್ರೇರಣಾದಾಯಕ ಶಿಕ್ಷಕ, ವಿದ್ಯಾರ್ಥಿಯನ್ನು ನಿದ್ರಾವಸ್ಥೆಯಿಂದ ಜಾಗೃತ ಚಿಂತನೆಗೆ ಕರೆದೊಯ್ಯಬಲ್ಲರು. ಶಿಕ್ಷಕರು ಸಮರ್ಪಕ ಸಂಬಳ, ಗೌರವ, ಕಾರ್ಯಸೌಕರ್ಯಗಳನ್ನು ಪಡೆದಾಗ ಮಾತ್ರ ಅವರು ಸಮರ್ಪಕವಾಗಿ ಮಕ್ಕಳನ್ನು ಬೋಧಿಸಬಲ್ಲರು. ಶಿಕ್ಷಕರ ಅಸಮಾಧಾನ, ಒತ್ತಡ, ಸಮಾಜದಿಂದ ದೂರವಾಗುತ್ತಿರುವ ಅನುಭವ ಇವೆಲ್ಲವು ಬೋಧನೆಯ ಗುಣಮಟ್ಟಕ್ಕೆ ನೇರವಾಗಿ ಹೊಡೆತ ನೀಡುತ್ತವೆ.

ಇಂದಿನ ಸಮಾಜದಲ್ಲಿ ಖಾಸಗಿ ಶಾಲೆಗಳು ಹೆಚ್ಚು ಆಕರ್ಷಕವಾಗುತ್ತಿವೆ. ಪೋಷಕರು ತಮ್ಮ ಮಕ್ಕಳನ್ನು ಅಲ್ಲಿ ಸೇರಿಸುತ್ತಿದ್ದಾರೆ. ಆದರೆ ಅಲ್ಲಿ ಕೆಲಸ ಮಾಡುವ ಶಿಕ್ಷಕರ ಪರಿಸ್ಥಿತಿ ಬಹುಮಟ್ಟಿಗೆ ದುರ್ಬಲ. ಕಡಿಮೆ ಸಂಬಳ, ಕೆಲಸದ ಒತ್ತಡ, ಹಕ್ಕುಗಳ ಕೊರತೆ ಇವುಗಳ ನಡುವೆಯೂ ಅವರು ಬೋಧಿಸುತ್ತಿದ್ದಾರೆ.

ಇದಕ್ಕೆ ವಿರುದ್ಧವಾಗಿ, ಸರ್ಕಾರಿ ಶಾಲಾ ಶಿಕ್ಷಕರಿಗೆ ಹೆಚ್ಚು ಭದ್ರತೆ ಇದ್ದರೂ, ಹಲವೆಡೆ ಅವರಿಂದ ಬೋಧನೆಯ ಗುಣಮಟ್ಟ ಪ್ರಶ್ನೆಯಾಗುತ್ತಿದೆ. ಈ ವ್ಯತ್ಯಾಸವೇ ನಮ್ಮ ಶಿಕ್ಷಣದ ಸಮಾನತೆಯನ್ನು ಹಾಳುಮಾಡುತ್ತಿದೆ.

ಸ್ಮಾರ್ಟ್ ಕ್ಲಾಸ್‌ಗಳು, ಡಿಜಿಟಲ್ ಪಾಠಗಳು ಇವು ಶಿಕ್ಷಕರ ಸ್ಥಾನವನ್ನು ಕಸಿಯುವುದಿಲ್ಲ. ಬದಲಿಗೆ, ಅವರ ಪಾತ್ರವನ್ನು ಇನ್ನಷ್ಟು ಶಕ್ತಿಶಾಲಿ ಮಾಡುತ್ತವೆ. ಶಿಕ್ಷಕರು ತಂತ್ರಜ್ಞಾನವನ್ನು ಸರಿಯಾಗಿ ಬಳಸಿಕೊಂಡರೆ, ಬೋಧನೆ ಹೆಚ್ಚು ಆಕರ್ಷಕ, ಅರ್ಥಪೂರ್ಣ, ವಿದ್ಯಾರ್ಥಿ ಕೇಂದ್ರೀಯವಾಗಬಹುದು. ಶಿಕ್ಷಕರಿಗೆ ಗೌರವ ಕೊಡುವುದು ಕೇವಲ ಶಾಲೆಯ ಕೆಲಸವಲ್ಲ. ಅದು ಪೋಷಕರು, ವಿದ್ಯಾರ್ಥಿಗಳು ಮತ್ತು ಸಮಸ್ತ ಸಮಾಜದ ಕರ್ತವ್ಯ. ವಿದ್ಯಾರ್ಥಿ ಶಿಕ್ಷಕರ ಮಾತುಗಳನ್ನು ಗೌರವಿಸದಿದ್ದರೆ, ಪೋಷಕರು ಶಿಕ್ಷಕರ ನಿರ್ಧಾರವನ್ನು ತಿರಸ್ಕರಿಸಿದರೆ ಬೋಧನೆ ತನ್ನ ಗಂಭೀರತೆಯನ್ನು ಕಳೆದುಕೊಳ್ಳುತ್ತದೆ.

ಶಿಕ್ಷಕರ ಸ್ಥಾನವು ಯಾವ ಕಾಲದಲ್ಲೂ ಬದಲಾಗಲಾರದ ಶ್ರೇಷ್ಠತೆ ಹೊಂದಿದೆ. ರಾಷ್ಟ್ರವನ್ನು ಕಟ್ಟುವವರು ರಾಜಕಾರಣಿಗಳು, ಅಧಿಕಾರಿಗಳು ಅಲ್ಲ, ಅದು ಶಿಕ್ಷಕರ ಮೂಲಕ ರೂಪುಗೊಂಡ ವಿದ್ಯಾರ್ಥಿಗಳೇ. ಆದ್ದರಿಂದ, ಶಿಕ್ಷಕರ ಗೌರವ, ಭದ್ರತೆ, ಸ್ವತಂತ್ರತೆ, ತೃಪ್ತಿ ಇವುಗಳನ್ನು ಬಲಪಡಿಸುವುದು ನಮ್ಮೆಲ್ಲರ ಹೊಣೆಗಾರಿಕೆ.



ಶಿಕ್ಷಕರನ್ನು ಗೌರವಿಸುವ ಸಮಾಜವೇ ನಿಜವಾದ ಅರ್ಥದಲ್ಲಿ ಜ್ಞಾನ ಸಮಾಜ. ಅವರು ಬೆಳಗಿದಾಗ ಮಾತ್ರ ರಾಷ್ಟ್ರ ಬೆಳೆಯುತ್ತದೆ.

– ಸಿಕಂದರ ಎಂ. ಆರಿ.
ಪತ್ರಕರ್ತರು, ಕಾನೂನು ವಿದ್ಯಾರ್ಥಿ.

## ಸೆ.10ರಂದು ಲೋಕಾಯುಕ್ತ ಜನ ಸಂಪರ್ಕ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಲೋಕಾಯುಕ್ತ ಗದಗ ಕಚೇರಿಯ ಪೊಲೀಸ್ ಅಧಿಕಾರಿಗಳು ಸೆಪ್ಟೆಂಬರ್ 10 ರ ಬುಧವಾರ ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ತಹಸೀಲ್ದಾರ್ ಕಚೇರಿ ಸಭಾಭವನ ಶಿರಹಟ್ಟಿಯಲ್ಲಿ ಲೋಕಾಯುಕ್ತ ಜನ ಸಂಪರ್ಕ ಸಭೆ ಮತ್ತು ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಅಂದು ಸಾರ್ವಜನಿಕರಿಂದ ದೂರು/ ಅಹವಾಲುಗಳನ್ನು ಸ್ವೀಕರಿಸಲಾಗುವುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರತಿಭಾ ಪುರಸ್ಕಾರ ಇಂದು

■ ವಿಜಯಸಾಕ್ಷಿ ಸುದ್ದಿ, ರೋಣ

ಹಜರತ್ ಮುಹ್ಮದ ಮುಸ್ತಫಾರವರ ಜನ್ಮದಿನದ ನಿಮಿತ್ತ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅನ್ನಸಂತರ್ಪಣೆ ಮತ್ತು ಮಿಥುನ್ ಜಿ.ಪಾಟೀಲ ಯುವ ಬ್ರಿಗೇಡ್ ಲೋಗೋ ಉದ್ಘಾಟನೆ ಸಮಾರಂಭ ಸೆ.5ರಂದು ಸಂಜೆ 4ಕ್ಕೆ ಆಝಾದ ಸಂಕೀರ್ಣದ ಬಳಿ



ಜರುಗಲಿದೆ. ಸಮಾರಂಭದಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕು ಎಂದು ಯುವ ಮುಖಂಡ ಅಸ್ಲಂ ಕೊಪ್ಪಳ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಪಿಜಿಗೆ ನುಗ್ಗಿ ಯುವತಿಯ ಮೈಮುಟ್ಟಿ ಎಸ್ಕೇಪ್ ಆಗಿದ್ದವ ಅರೆಸ್ಟ್!

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ನಗರದ ಸುದ್ದಗುಂಟೆಪಾಳ್ಯದ ಲೇಡಿಸ್ ಪಿ.ಜಿಗೆ ನುಗ್ಗಿ ಯುವತಿಯ ಮೈ ಮುಟ್ಟಿ ಲೈಂಗಿಕ ಕಿರುಕುಳ ಕೊಟ್ಟಿದ್ದ ಆರೋಪಿಯನ್ನು ಇದೀಗ ಪೊಲೀಸರು ಬಂಧಿಸಿದ್ದಾರೆ.

ಕೆ. ನರೇಶ್ ಪಟ್ಯಂ ಬಂಧಿತ ಆರೋಪಿ. ಘಟನೆ ನಂತರ ಸಿಸಿಟಿವಿ ಆಧರಿಸಿ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಈತ ಬೈಕ್ ಟ್ಯಾಕ್ಸಿ ಹಾಗೂ ಡೆಲಿವರಿ ಬಾಯ್ ಆಗಿ ಕೆಲಸ ಮಾಡಿಕೊಂಡು ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸವಾಗಿದ್ದ. ಆದರೆ ಕಳ್ಳತನ ಮಾಡುವುದು ಕೂಡ ಆತನ ಕಸುಬಾಗಿತ್ತು. ಹೀಗಾಗಿ ಕಳ್ಳತನ ಮಾಡಲು ಪಿಜಿಗೆ ನುಗ್ಗಿದ್ದ ವೇಳೆ ಯುವತಿಯ ದೇಹವನ್ನು ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ತನಿಖೆ ವೇಳೆ ಗೊತ್ತಾಗಿದೆ.


### "ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ" ಪ್ರಯುಕ್ತ ಕವನ

## "ಶ್ರೀ ಗುರುಭ್ಯೋ ನಮಃ"

ಮಕ್ಕಳ ಭರವಸೆಯ ಬೆಳಕಾಗಿ
ನಿಸ್ವಾರ್ಥ ಸೇವೆಯ ಸೆಲೆಯಾಗಿ
ನೋವ ಮರೆಸೋ ಚಿಲುಮೆಯಾಗಿ
ಜ್ಞಾನದ ಹೊನಲಾಗಿದಿರಿ ನೀವೆಮಗೆ..ಶ್ರೀಗುರುವೇ..

ಅನುದಿನದ ಸೂರ್ಯನಂತೆ
ಹೊಂಬೆಳಕಿನ ಚಂದ್ರನಂತೆ
ಉಸಿರ ನೀಡುವ ತಾಯಿಯಂತೆ
ಸಪ್ತಸಾಗರದ ಅಲೆಯಂತೆ
ಸಾಗುತಿಹುದು ನಿಮ್ಮ ಬದುಕು....ಶ್ರೀಗುರುವೇ...

ಅರಿತು ನಡೆಯಲು ಕಲಿಸಿದಿರಿ
ನಕ್ಕು ನಲಿದು ಶುಭ ಹಾರೈಸಿದಿರಿ
ತಾಳ್ಮೆಯ ಗುಣ ಬೆಳೆಸಿದಿರಿ
ಸಂಸ್ಕಾರವನ್ನು ಧಾರೆಯೆರೆದಿರಿ
ನಿಮಗೆ ಸದಾ ಚಿರಋಣಿ ನಾವು...ಶ್ರೀಗುರುವೇ...



ಮಕ್ಕಳ ಬಾಳಿಗೆ ಮೇಣದ ಬತ್ತಿಯಾದಿರಿ..
ಬಾಳ ಹಾದಿಗೆ ನಂದಾದೀಪವಾದಿರಿ..
ನೋವನುಂಡು ಖುಷಿಯ ಹಂಚಿದಿರಿ...
ಗುರುವಿನ ಗುರು ಮಹಾಗುರುವಾಗಿ
ಅಕ್ಷರ ಜ್ಯೋತಿ ಬೆಳಗಿಸಿದಿರಿ...
ಶರಣು ಶರಣಾರ್ಥಿ ಶ್ರೀ ಗುರುವೆ ಸದ್ಗುರುವೇ..
ನಮೋ ನಮಃ .....

–ಪ್ರಕಾಶ ಶಿ ಶಿವಶಿಂಪಿಗೇರ
ಶಿಕ್ಷಕರು, ಗುರುಬಸವ ಶಾಲೆ ಗದಗ


### ಪ್ರವಾದಿ ಮುಹಮ್ಮದ್ ಪೈಗಂಬರರ ಮೌಲ್ಯಗಳ ಕುರಿತ ವಿಶೇಷ ಲೇಖನ

# ಪರಧರ್ಮ ಸಹಿಷ್ಣುತೆಯ ಮೇರು ಪರ್ವತ

ಮುಹಮ್ಮದ್ ಪೈಗಂಬರರು ಹಾಗೂ ಬಸವಣ್ಣನವರು ಈ ಜಗತ್ತು ಕಂಡ ಮಹಾನ್ ಮಾನವತಾವಾದಿಗಳು. ಇವರು ಸಮಾಜದಲ್ಲಿರುವ ಅಸಮಾನತೆ ಹಾಗೂ ಅನ್ಯಾಯಗಳನ್ನು ವಿರೋಧಿಸಿ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ವಿಶ್ವಮಾನವರಾಗಿ ಜನರ ಹೃದಯದಲ್ಲಿ ಶಾಶ್ವತವಾಗಿ ವಿರಾಜಮಾನರಾಗಿದ್ದಾರೆ. ಇವರು ಕೇವಲ ಬೋಧನೆಗೆ ಸೀಮಿತರಾಗದೇ ತಮ್ಮ ತತ್ವ-ಸಿದ್ಧಾಂತಗಳನ್ನು ಆಚರಣೆಗೆ ತಂದು ಅವುಗಳ ವಾಸ್ತವಿಕತೆಯನ್ನು ಸಾರಿ ಹೇಳಿದ್ದಾರೆ.

ಧರ್ಮಪಾಲನೆ, ನಿಜ ಅರ್ಥದಲ್ಲಿ ಇವತ್ತಿನ ದಿನಮಾನದ ಬೆಳವಣಿಗೆಗಳನ್ನು ಪರಿಗಣಿಸಲಾಗಿ ಪರಧರ್ಮ ಸಹಿಷ್ಣುತೆಯನ್ನು ತಿಳಿದು ಆಚರಿಸುವುದು ಸಮಾಜದ ಆರೋಗ್ಯಕ್ಕೆ ಹಿತ. ಧರ್ಮದ ಮೂಲ ಉದ್ದೇಶ ತಿಳಿದಾಗ ಅದು ಪರಧರ್ಮ ಸಹಿಷ್ಣುತೆಯೇ ಆಗಿರುತ್ತದೆ. ಆಚರಣೆಗಳನ್ನು ಒಬ್ಬರನ್ನು ನೋಡಿ ಅನುಕರಣೆ ಮಾಡುತ್ತೇವೆ. ನಿಜ ಅರ್ಥದಲ್ಲಿ ಮೂಲ ಶಾಸ್ತ್ರವನ್ನು ತಿಳಿದು ಮಾಡುವುದಿಲ್ಲ. ಹೀಗೆ ಆಚರಣೆಗಳು ನಮ್ಮ ಸಂಪ್ರದಾಯಕ್ಕೆ ಸೀಮಿತವಾಗಿದೆ.

ಪೈಗಂಬರರು ಸಾವಿಗಿಂತ ಮೊದಲು ಸಾವಿನ ತಯಾರಿ ಮಾಡಿಕೋ ಎನ್ನುವ ಸಂದೇಶವನ್ನು ಕೊಡುತ್ತಾರೆ. ಕೋವಿಡ್ ಬಂದಾಗ ಎಲ್ಲರೂ ಜೀವಕ್ಕೆ ಹೆದರಿ ಜೀವ



ಉಳಿಸಿಕೊಳ್ಳಲು ಎಲ್ಲ ತರಹದ ಮುನ್ನೆಚ್ಚರಿಕೆಗಳನ್ನು ಮಾಡಿಕೊಂಡಿದ್ದೆವು. ಅದೇ ತರಹ ನಮ್ಮ ಹಾಗೂ ಜಗತ್ತಿನ ಅಂತ್ಯದ ಬಗ್ಗೆ ಚರ್ಚಿಸಿದ್ದೆವು. ಅನ್ಯರೊಂದಿಗೆ ಸೋದರತ್ವ ಸಂಬಂಧಗಳನ್ನು ಗಟ್ಟಿ ಮಾಡಿಕೊಂಡಿದ್ದೆವು. ಆದರೆ ಈಗ, ಇಂತಹ ಘಟನೆ ನಮ್ಮ ಜೀವನದಲ್ಲಿ ನಡೆದೇ ಇಲ್ಲ ಎನ್ನುವ ತರಹ ಮತ್ತೆ ನಮ್ಮ ಗತ್ತನ್ನು ಹಿಡಿದಿದ್ದೇವೆ.

ಇಸ್ಲಾಂ ಧರ್ಮದಲ್ಲಿ ಪರಧರ್ಮ ಸಹಿಷ್ಣುತೆಗೆ ಬಹಳಷ್ಟು ಮಹತ್ವವಿದೆ. ಅನ್ಯ ಧರ್ಮದವರನ್ನು ಪ್ರೀತಿಯಿಂದ ಹಾಗೂ ಅಂತಃಕರಣದಿಂದ ಕಾಣಬೇಕು. ಕಷ್ಟದಲ್ಲಿದ್ದವರಿಗೆ ಸಹಾಯ ಹಸ್ತ ಚಾಚಬೇಕು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಮುಖ ಆದ್ಯತೆ ಕೊಟ್ಟು ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಪೈಗಂಬರರು ಅಗ್ರರು. ಈ ರೀತಿಯ ತಿಳುವಳಿಕೆ ಸಮಾಜದಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ನಿರ್ಣಯಗಳನ್ನು ತೆಗೆದುಕೊಳ್ಳಲು ಬುನಾದಿಯಾಗಿ ನಿಲ್ಲುತ್ತವೆ. ಹೆಣ್ಣು ಮಕ್ಕಳಿಗೆ ಶಿಕ್ಷಣದ ಜೊತೆಗೆ ಧಾರ್ಮಿಕ ಶಿಕ್ಷಣಕ್ಕೆ ಪ್ರಮುಖ ಆದ್ಯತೆ ಕೊಟ್ಟು ಅವರನ್ನು ಶಕ್ತಿಯುತ ಹಾಗೂ ಆರೋಗ್ಯವಂತ ಸಮಾಜವನ್ನು ಕಟ್ಟಲು ಮನುಕುಲವನ್ನು ಸದೃಢರನ್ನಾಗಿ ಮಾಡುವಲ್ಲಿ ಪೈಗಂಬರರ ಪಾತ್ರ ಪ್ರಶಂಸನೀಯ.

ನಾವು ಶ್ರಮ ಜೀವಿಗಳು, ಪ್ರಾಮಾಣಿಕರು ಆಗುವುದರೊಂದಿಗೆ ಇನ್ನೊಬ್ಬರ ಪರಿಶ್ರಮಕ್ಕೂ ಬೆಲೆಯನ್ನು ಗೌರವವನ್ನು ಕೊಡುವ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಒಬ್ಬ ಕಾರ್ಮಿಕನಿಂದ ಕೆಲಸ ಮಾಡಿಸಿಕೊಂಡು ಅವನ ಬೆವರಹನಿ ಆರುವ ಮೊದಲೇ ಅವನಿಗೆ ಸಂದುವ ಸಂಭಾವನೆಯನ್ನು ತಲುಪಿಸಬೇಕು ಅನ್ನುವುದು ಪೈಗಂಬರರ ಪ್ರತಿಪಾದನೆ. ಹೀಗೆ ಅವರು ಸಮಾಜದ ಎಲ್ಲ ಸ್ತರದ ವ್ಯಕ್ತಿಗಳು ಹಾಗೂ ಅವರ ಕೆಲಸಕ್ಕೆ ಗೌರವವನ್ನು ಕೊಡುತ್ತಿದ್ದರು.

ಪೈಗಂಬರರು ಜಗತ್ತಿಗೆ ಬೆಳಕನ್ನು ತೋರಿಸಿದ ಪ್ರವಾದಿ. ಅವರು ಆಗರ್ಭ ಶ್ರೀಮಂತ ಮಹಿಳೆಯನ್ನು ಮದುವೆಯಾಗಿ ತಮ್ಮ ಹಾಗೂ ಹೆಂಡತಿಯ ಸಿರಿ-ಸಂಪತ್ತನ್ನು ಧರ್ಮದ ಮಾರ್ಗದಲ್ಲಿ ಹಂಚಿ ತ್ಯಾಗಮಾಡಿ ಕೃತಾರ್ಥರಾದವರು. ಜಗತ್ತಿಗೆ ಬೆಳಕು ತೋರಿಸಿದ ಪ್ರವಾದಿಯ ಮನೆಯಲ್ಲಿ ಮನೆ ದೀಪ ಬೆಳಗಲು ಎಣ್ಣೆ ಸಹ ಇರಲಿಲ್ಲ.

ಅಂದರೆ, ಸರ್ವಸ್ವವನ್ನು ಧರ್ಮಮಾರ್ಗದಲ್ಲಿ ತ್ಯಾಗ ಮಾಡಿ (ಖರ್ಚು ಮಾಡಿ) ತಾವು ಮಾಡಿದ ಸತ್ಕಾರ್ಯ ದೇವರನ್ನು ಒಲಿಸಲು ಸಂಪಾದಿಸಿದ ಪುಣ್ಯ, ಧರ್ಮ ಮಾತ್ರ ತಮ್ಮ ಜೊತೆಗೆ ಕರೆದುಕೊಂಡು ಹೋದ ಜಗಜ್ಯೋತಿಯೇ ಮಹಮ್ಮದ್ ಪೈಗಂಬರರು.

ಇದೇ ಮಾನವೀಯತೆಯನ್ನು ಶರಣರು ಹಾಗೂ ಪೈಗಂಬರರು ಎತ್ತಿ ಹಿಡಿಯುವ ಹಾಗೂ ಮಾನವೀಯತೆಯನ್ನು ಆಚರಣೆಯಲ್ಲಿ ತರಲು ತತ್ವ-ಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಇದೇ ಕಾರಣಕ್ಕೆ ಪವಿತ್ರ ಕುರಾನ್ನಲ್ಲಿ ಓ ಮನುಜರೆ, ಓ ಸತ್ಯ ಪರಿಪಾಲಕರೆ ಎಂದು ಮನುಷ್ಯ ಜಾತಿಗೆ ಸಂಬೋಧಿಸಲಾಗಿದೆ ವಿನಃ ಓ ಮುಸಲ್ಮಾನರೆ ಎಂದು ಎಲ್ಲಿಯೂ ಹೇಳಿಲ್ಲ. ಈ ಎಲ್ಲ ತತ್ವ ಸಿದ್ಧಾಂತಗಳನ್ನು ಅರ್ಥೈಸಿ, ಅಳವಡಿಸಿಕೊಂಡಲ್ಲಿ ಸೌಹಾರ್ದತೆ, ಶಾಂತಿ, ನೆಮ್ಮದಿ ಸಮೃದ್ಧಿ ತಾನಾಗಿಯೇ ನೆಲೆಸುತ್ತದೆ ಎಂಬುದು ಪ್ರವಾದಿ ಅವರ ಸಂದೇಶವಾಗಿದೆ.



– ಡಾ. ಮೊಹಮ್ಮದ ಸಮುದ್ರಿ.
ಡಿಜಿಎಮ್ ಆಯುರ್ವೇದ ಮಹಾವಿದ್ಯಾಲಯ, ಗದಗ.

## ಎಲ್‌ಐಸಿಯಿಂದ ಲಕ್ಷಾಂತರ ಜನರಿಗೆ ಉದ್ಯೋಗ




■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪ್ರಪಂಚದಲ್ಲೇ ಉತ್ತಮ ಹಣಕಾಸಿನ ವ್ಯವಹಾರವನ್ನು ಹೊಂದಿರುವ ಹಾಗೂ ಜನಸಾಮಾನ್ಯರಿಗೆ ಕ್ಷಿಪ್ರಗತಿಯಲ್ಲಿ ಹಣ ಸಂದಾಯ ಮಾಡುವ ಏಕೈಕ ಸಂಸ್ಥೆ ಎಂದರೆ ಭಾರತೀಯ ಜೀವ ವಿಮಾ ನಿಗಮ ಎಂದು ಭಾರತೀಯ ಜೀವ ವಿಮಾ ನಿಗಮ ಸಂಪರ್ಕ ಶಾಖೆಯ ಶಾಖಾ ವ್ಯವಸ್ಥಾಪಕ ಜಿ. ಸುಧೀರಕುಮಾರ ಹೇಳಿದರು.

ಅವರು ಪಟ್ಟಣದ ಸಂಪರ್ಕ ಶಾಖಾ ಕಚೇರಿಯಲ್ಲಿ ಎಲ್‌ಐಸಿಯ 69ನೇ ವಾರ್ಷಿಕೋತ್ಸವದ ನಿಮಿತ್ತ ಪಾಲಿಸಿದಾರರೊಂದಿಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಎಲ್‌ಐಸಿ ಗ್ರಾಮೀಣಮಟ್ಟದಲ್ಲಿ ಪ್ರತಿನಿಧಿಗಳನ್ನು ನೇಮಕ ಮಾಡಿ ಲಕ್ಷಾಂತರ ಜನರಿಗೆ ಉದ್ಯೋಗ ದೊರಕಿಸಿಕೊಟ್ಟಿದೆ. ಸ್ವಾವಲಂಬಿಯಾಗಿ ಜೀವನ ಸಾಗಿಸುತ್ತ ಪ್ರತಿನಿಧಿಯಾಗಿ ಅನೇಕರು ಜೀವನ ಕಂಡುಕೊಂಡಿದ್ದಾರೆ. ಇತ್ತೀಚೆಗೆ ದೇಶದ ಪ್ರಧಾನ ಮಂತ್ರಿಗಳು ಮಹಿಳೆಯರಿಗಾಗಿ ಬಿಮಾಸಕಿ ಯೋಜನೆಯನ್ನು ಜಾರಿಗೆ ತಂದಿದ್ದು, 1 ಲಕ್ಷ ಮಹಿಳೆಯರಿಗೆ ಉದ್ಯೋಗ ನೀಡಿದೆ. ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿಸುವ ಉದ್ದೇಶ ಹೊಂದಿದೆ. ದೇಶದಲ್ಲಿ ಒಟ್ಟು 30 ಕೋಟಿಗಿಂತ ಹೆಚ್ಚು ಪಾಲಿಸಿದಾರರು ಇದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಭಿವೃದ್ಧಿ ಅಧಿಕಾರಿಗಳಾದ ಶರಣಪ್ಪ ಎಂ.ಬಿ, ಆನಂದ ಶಿರಗುಪ್ಪಿ, ಅರ್ಜುನ ಹುಲ್ಲಣ್ಣವರ, ತೇಜಸ್ ಶಾಸ್ತ್ರೀ, ಆಡಳಿತ ಅಧಿಕಾರಿಗಳಾದ ಸಂಗೀತಾ ವೇರ್ಣೇಕರ, ಅಬ್ದುಲ್ ಹಕ್, ಪ್ರತಿನಿಧಿಗಳಾದ ಶಿವಾನಂದ ವಡಕಣ್ಣವರ, ಗುರುನಾಥ ಮರಾಠೆ, ಸುರೇಶ್ ಹರ್ತಿ ಮಾರುತಿ ಭಜಂತ್ರಿ, ಮಾಸ್ತನಅಲಿ, ಸಿಬ್ಬಂದಿ ರವಿ ಏಳುಮಗ್ಗದ ಇದ್ದರು.

### ಕದಳಿಶ್ರೀ ವೇದಿಕೆಯಿಂದ ಶಿಕ್ಷಕರ ದಿನಾಚರಣೆ ಅಂಗವಾಗಿ 'ಗುರುವಂದನೆ'

# ಶಿಕ್ಷಣದಿಂದ ಗುಣಾತ್ಮಕ ಬದಲಾವಣೆ ಸಾಧ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಶಿಕ್ಷಣವು ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರಬಲ್ಲದು. ಅನುಭವವು ನಮ್ಮ ಬದುಕನ್ನು ಹದಗೊಳಿಸಿದರೆ ಶಿಕ್ಷಣವು ಹದವಾದ ಬದುಕಿಗೆ ಅರ್ಥ ನೀಡುವದು. ಮಗುವೊಂದು ಬೆಳೆದು ಸತ್ಪ್ರಜೆಯಾಗಲು ಉತ್ತಮ ಶಿಕ್ಷಣ ಬೇಕು. ಇಂತಹ ಶಿಕ್ಷಣ ನೀಡುವ ಶಿಕ್ಷಕರ ಸೇವೆ ಅನುಪಮವಾದದ್ದು ಎಂದು ನಿವೃತ್ತ ಉಪನ್ಯಾಸಕರು, ಗದಗ ಅಡವೀಂದ್ರ ಸ್ವಾಮಿಮಠದ ಧರ್ಮದರ್ಶಿ ಪೂಜ್ಯ ಮಹೇಶ್ವರ ಸ್ವಾಮೀಜಿ ಹೊಸಳ್ಳಿಮಠ ಹೇಳಿದರು.



ಗದಗ ಜಿಲ್ಲಾ ಶರಣೆ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆ ವತಿಯಿಂದ ಶಿಕ್ಷಕರ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ 'ಗುರುವಂದನೆ' ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಶಿಕ್ಷಕರು ಸುಂದರ ಸಮಾಜದ ನಿರ್ಮಾತೃಗಳಾಗಿದ್ದು, ಶಿಕ್ಷಕ ವೃತ್ತಿಯು ಬರೀ ಜೀವನ ವೃತ್ತಿಯಲ್ಲ. ಸಮಾಜದಲ್ಲಿ ಮಕ್ಕಳ ಭವ್ಯ ಭವಿಷ್ಯವನ್ನು ರೂಪಿಸಬಲ್ಲ ಜವಾಬ್ದಾರಿಯುಳ್ಳವರು. ಇಂತಹ ಜವಾಬ್ದಾರಿ ಹೊರಲು ವಿಸ್ತೃತವಾದ ಜ್ಞಾನದ ಭಂಡಾರ, ಸಂಯಮ, ಅಂತರ್ಯದಲ್ಲಿ ಯತಿಯಂತಹ ಭಾವಗಳು, ದೂರದೃಷ್ಟಿಯಂತಹ ಮಹತ್ವದ ಅಂಶಗಳನ್ನು ಹೊಂದಿರಬೇಕು ಎಂದರು.

ಗದುಗಿನ ಕಾಶೀ ವೈದಿಕ ಪಾಠಶಾಲೆಯ ಮುಖ್ಯೋಪಾಧ್ಯಾಯ ಗುರುಸಿದ್ಧಯ್ಯ ಹಿರೇಮಠ ಮಾತನಾಡಿ, ಬೋಧನೆ ಒಂದು ಸಂಕೀರ್ಣ ಕೌಶಲ. ಇದು ಒಂದು ನಿರ್ದಿಷ್ಟವಾದ, ಉದ್ದೇಶಪೂರ್ವಕವಾದ ಹಾಗೂ ಪ್ರಜ್ಞಾಪೂರ್ವಕವಾದ ಕ್ರಿಯೆ. ಶಿಕ್ಷಕರ ವೃತ್ತಿ ಜೀವನವು ಆರಂಭದಿಂದ ಅಂತ್ಯದವರೆಗೂ ತನ್ನರಿವೇ ತನಗೆ ಗುರು ಎಂಬಂತೆ ಸಾಗುತ್ತದೆ ಎಂದರು.

ಸಂಪನ್ಮೂಲ ವ್ಯಕ್ತಿ ಕವಿತಾ ಬೇಲೇರಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಕ ಜೀವನವು ಪವಿತ್ರವಾದದ್ದು. ಮಕ್ಕಳಲ್ಲಿ ಅಕ್ಷರದ ಅರಿವು ಮೂಡಿಸಿ ಅವರನ್ನು ಅಕ್ಷರಸ್ಥರನ್ನಾಗಿ ಮಾಡಿ ಜೀವನದ ಪಥದಲ್ಲಿ ಯಶಸ್ಸು ಸಾಧಿಸುವಂತೆ ಮಾಡುವುದಾಗಿದೆ ಎಂದರು.

ವೀಣಾ ಬೇಲಿ ಪ್ರಾರ್ಥಿಸಿದರು, ಸುಮಾ ಪಾಟೀಲ ಸ್ವಾಗತಿಸಿದರು. ಸುಶೀಲಾ ಕೋಟಿ ನಿರೂಪಿಸಿದರು. ಸುಧಾ ಬೆನಕಲ್ಲ ಪರಿಚಯಿಸಿದರು. ಸುಮತಿ ಗದಗಿನಮಠ ವಂದಿಸಿದರು.

### ಶಾಲಾ ಶಿಕ್ಷಣ ಸವಾಲುಗಳ ಕುರಿತ ಉಪನ್ಯಾಸದಲ್ಲಿ ಎಫ್.ಸಿ. ಚೇಗರಡ್ಡಿ ಅಭಿಮತ

# ಅನ್ಯಕಾರ್ಯದ ಹೊರೆಯಿಂದ ಶಿಕ್ಷಣದ ಗುಣಮಟ್ಟ ಕುಸಿತ

■ ವಿಜಯಸಾಕ್ಷಿ ಸುದ್ದಿ, ಗದಗ

ಕಲಿಸುವದಕ್ಕೆ ಶಿಕ್ಷಕ ಸೀಮಿತವಾಗಿದ್ದ ಸಂದರ್ಭದಲ್ಲಿ ಶಿಕ್ಷಣದ ಗುಣಮಟ್ಟ ತೃಪ್ತಿದಾಯಕವಾಗಿತ್ತು. ಆದರೆ ಇಂದು ವಿವಿಧ ಕಾರ್ಯಗಳ ಹೊರೆಯಿಂದ ಬೋಧನೆ ಮತ್ತು ಕಲಿಕಾ ಸಮಯದ ಕೊರತೆಯಿಂದ ಶೈಕ್ಷಣಿಕ ಮಟ್ಟ ಕುಸಿತ ಕಂಡಿದೆ. ಶಿಕ್ಷಕರ ಕೊರತೆಯೂ ಇದಕ್ಕೆ ಕಾರಣವಾಗಿದೆ ಎಂದು ಶಿಕ್ಷಣ ಚಿಂತಕ ಎಫ್.ಸಿ. ಚೇಗರಡ್ಡಿ ಅಭಿಪ್ರಾಯಪಟ್ಟರು

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿ ಗದಗ ವತಿಯಿಂದ ಗದುಗಿನ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನ, ಕ.ಸಾ.ಪ ಕಾರ್ಯಾಲಯದಲ್ಲಿ ಶಿಕ್ಷಕ ದಿನಾಚರಣೆ ಅಂಗವಾಗಿ ಜರುಗಿದ ಶೈಕಣಿಕ ಚಿಂತನಾ ಗೋಷ್ಠಿಯಲ್ಲಿ ಮಾತನಾಡಿದರು.

ಶಾಲೆಗೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಅಂತರ್ಜಾಲದ ಮುಖಾಂತರ ದಾಖಲಿಸಬೇಕಾಗಿದೆ. ಅಕ್ಷರ ದಾಸೋಹ, ದಾಖಲೆಗಳ ನಿರ್ವಹಣೆ, ಫಲಿತಾಂಶ ವೃದ್ಧಿ ಮುಂತಾದ ಒತ್ತಡದಿಂದ ಶಿಕ್ಷಕ ಸಮುದಾಯ ಖುಷಿಯಿಂದ ಬೋಧನೆ ಮಾಡುವ ಸಂದರ್ಭಗಳಿಂದ ವಂಚಿತರಾಗಿದ್ದಾರೆ. ಸರಕಾರಿ ಶಾಲೆಗಳ ವಿಲೀನದಿಂದ ತಳಸಮುದಾಯಗಳು ಶಿಕ್ಷಣದಿಂದ ದೂರ ಉಳಿಯುವ ಅಪಾಯವಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಉಪನಿರ್ದೇಶಕ ಎ.ಎನ್. ನಾಗರಳ್ಳಿ ಮಾತನಾಡಿ, ಅನ್ಯ ಕಾರ್ಯಗಳ ಹೊರೆಯಿಂದ ಶಿಕ್ಷಕರನ್ನು ಮುಕ್ತಗೊಳಿಸುವ ಬಗ್ಗೆ ಇಲಾಖೆ ಚಿಂತಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ವಿನೂತನ ಪ್ರಯತ್ನಗಳ



ಮೂಲಕ ಎಫ್.ಸಿ. ಚೇಗರಡ್ಡಿ ಗಮನ ಸೆಳೆದಿದ್ದಾರೆ. ಚಿಣ್ಣರ ಮೇಳ, ವಿಜ್ಞಾನ ಮೇಳ, ಮಕ್ಕಳ ಸಾಹಿತ್ಯ ಸಂಭ್ರಮದಂತಹ ಅನೇಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿ ಸಂತಸ ಕಲಿಕೆಯ ವಿಚಾರಗಳನ್ನು ನಾಡಿನಾದ್ಯಂತ ಪಸರಿಸಿದ್ದಾರೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ಒತ್ತಡಗಳ ಮಧ್ಯೆಯೂ ಶಿಕ್ಷಕರು ಸ್ವಯಂಸ್ಫೂರ್ತಿಯಿಂದಲೇ ಕಾರ್ಯ ನಿರ್ವಹಿಸುತ್ತಿರುವದರಿಂದ ಶಿಕ್ಷಣ ಕ್ಷೇತ್ರ ಇಂದಿಗೂ ಘನತೆಯನ್ನು ಹೊಂದಿದೆ. ಡೆಪ್ಯುಟಿ ಚನ್ನಬಸಪ್ಪನವರು ಕನ್ನಡ ಶಾಲೆಗಳ ಸ್ಥಾಪನೆಯ ಮೂಲಕ ಕನ್ನಡ ಸಂಸ್ಕೃತಿಯ ಹೆಚ್ಚಳಕ್ಕೆ ಕಾರಣರಾಗಿದ್ದಾರೆ. ಕನ್ನಡ ಬೆಳವಣಿಗೆಯ ಹಿನ್ನೆಲೆಯಲ್ಲಿ ಕನ್ನಡ ಶಾಲೆಗಳನ್ನು ಉಳಿಸಿ-ಬೆಳೆಸುವ ದಿಸೆಯಲ್ಲಿ ಜನಾಂದೋಲನ ರೂಪುಗೊಳ್ಳಬೇಕಾದುದು ಅವಶ್ಯಕ ಎಂದು ತಿಳಿಸಿದರು.

ವೇದಿಕೆ ಮೇಲೆ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ನಡುವಿನಮನಿ ಉಪಸ್ಥಿತರಿದ್ದರು. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಡಿ.ಎಸ್. ಬಾಪುರಿ, ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಡಿ.ಎಸ್.ಬಾಪುರಿ ವಂದಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯಕ್ರಮದಲ್ಲಿ ಎಸ್.ಡಿ. ಗಾಂಜಿ, ಅನ್ನದಾನಿ ಹಿರೇಮಠ, ರಾಹುಲ ಗಿಡ್ನಂದಿ, ಶೇಖರಪ್ಪ ಕಳಸಾಪೂರಶೆಟ್ಟರ, ಕೆ.ಎಸ್. ಬಾಳಿಕಾಯಿ, ಬಿ.ಎಸ್. ಹಿಂಡಿ, ಬಿ.ಬಿ. ಹೊಳಗುಂದಿ, ಎಂ.ಎಫ್. ದೋಣಿ, ಶೈಲಾ ಗಿಡ್ನಂದಿ, ಶರಣಪ್ಪ ಹೊಸಂಗಡಿ, ಎಸ್.ವಿ. ಕುಂದಗೋಳ, ರಾಜಶೇಖರ ಕರಡಿ, ಸಿದ್ಧಲಿಂಗೇಶ ಸಜ್ಜನಶೆಟ್ರ, ರತ್ನಕ್ಕ ಪಾಟೀಲ, ಮೀನಾಕ್ಷಿ ಜಂಗಮನಿ, ಶಶಿಕಲಾ ಬಳ್ಳೊಳ್ಳಿ, ಶಿವಲಿಂಗಪ್ಪ ಅಣ್ಣಿಗೇರಿ, ಎಸ್.ಎಂ. ಕಾತರಕಿ, ಶಿಲ್ಪಾ ಹಳ್ಳಿಕೇರಿ, ಪ್ರಕಾಶ ಕರ್ಕಿಕಟ್ಟಿ, ಸಿದ್ದು ಮಾಳವಾಡ, ಶಶಿಕಾಂತ ಕೊರ್ಲಹಳ್ಳಿ, ರಾಜಶೇಖರ ದಾನರಡ್ಡಿ, ಈರಪ್ಪ ಸೊರಟೂರ, ಸಿ.ಎಂ. ಮಾರನಬಸರಿ, ಎಸ್.ಎ. ಆವಾರಿ, ಎಸ್.ಸಿ. ಹಾಳಕೇರಿ, ಜಯದೇವ ಮೆಣಸಗಿ, ನಿಂಗು ಸೊಲಗಿ, ಎ.ಸಿ. ಹಿರೇಮಠ, ಕೆ.ಎಸ್. ಗುಗ್ಗರಿ, ಎಸ್.ಎಲ್. ಕುಲಕರ್ಣಿ, ಆರ್.ಎಂ. ತಾಣೇದ, ಎಸ್.ಐ. ಯಾಳಗಿ, ಅಶೋಕ ಗಿರಡ್ಡಿ, ಅಶೋಕ ಸತ್ಯರಡ್ಡಿ, ಎಂ.ಎಂ. ಕಾಗದಗಾರ, ಶ್ಯಾಮ ಲಾಂಡೆ, ಪ್ರೇಮಾ ಹಟ್ಟಿ, ರತ್ನಾಬಾಯಿ ಪುರಂತರ, ಎಂ.ಎಸ್. ಹಾಲಶೆಟ್ಟಿ, ಶಿಲ್ಪಾ ಮ್ಯಾಗೇರಿ, ಉಮಾ ಕಣವಿ, ಈಶ್ವರಪ್ಪ ಹಂಚಿನಾಳ, ಸುರೇಶ ಕುಂಬಾರ, ಬಿ.ಜಿ. ಗಿರಿತಿಮ್ಮಣ್ಣವರ, ರಮೇಶ ಲಮಾಣಿ, ಜಿ.ಬಿ. ಪಾಟೀಲ, ಬಿ.ವಾಯ್. ಡೊಳ್ಳಿನ, ವಿಶ್ವನಾಥ ಕಮ್ಮಾರ, ರವಿ ದೇವರಡ್ಡಿ ಮೊದಲಾದವರು ಭಾಗವಹಿಸಿದ್ದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಮಾತನಾಡಿ, ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಶಿಕ್ಷಕ ಸ್ಪಂದಿಸಬೇಕಾಗುತ್ತದೆ. ಇಲಾಖೆಯ ಯೋಜನೆಗಳು ಎಲ್ಲ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಹಿನ್ನೆಲೆಯಲ್ಲಿಯೇ ರೂಪಿತವಾಗಿವೆ. ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ದಿಸೆಯಲ್ಲಿ ಶಿಕ್ಷಕ ಸಮುದಾಯ ಪ್ರಯತ್ನಿಸಿ, ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಶ್ರಮಿಸಬೇಕಾಗಿದೆ ಎಂದು ತಿಳಿಸಿದರು.

# ಉಚಿತ ತರಬೇತಿ ಉದ್ಘಾಟನೆ ಇಂದು

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸೆ.5ರಂದು ಬೆಳಿಗ್ಗೆ 11 ಗಂಟೆಗೆ ಸಹ್ಯಾದ್ರಿ ಗ್ರಾಮೀಣಾಭಿವೃದ್ಧಿ-ನಗರಾಭಿವೃದ್ಧಿ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಒಂದು ತಿಂಗಳ ಉಚಿತ ಬ್ಯೂಟಿ ಪಾರ್ಲರ್ ಮತ್ತು ಮೇಕಪ್ ತರಬೇತಿ ಉದ್ಘಾಟನೆಒಳ್ಳಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಸಿ. ಬಡ್ನಿ ವಹಿಸುವರು. ಉದ್ಘಾಟಕರಾಗಿ ದಿವ್ಯಾ ಚಿಕ್ಕಮಠ ಆಗಮಿಸುವರು. ಶಿಲ್ಪಾ ಬದ್ರಾಳಿಮಠ, ಅಶೋಕ ಸೋನಗೋಜಿ, ವಿಜಯ ನೀಲಗುಂದ, ಬಸವರಾಜ ಹಾರೋಗೇರಿ, ಪುನಿತ ಓಲೆಕಾರ, ಪ್ರಕಾಶ ಮದ್ದಿನ, ಧಶರತ ಕೋಟೆಗೌಡ್ರ, ಮಂಜುನಾಥ ಮಟ್ಟಿ, ಮಂಜುನಾಥ ವಾಲಿ, ಹರ್ಷಲತಾ ದೇಶಪಾಂಡೆ, ಗೀತಾ ಜಾಧಾವ, ಅಕ್ಕಮ್ಮಾ ನೀಲಗುಂದ, ಶಾಂತಾ, ಸುಜಾತಾ ಚವ್ಹಾಣ, ಶೋಭಾ ಕರಡಿ, ನಾಗವೇಣಿ ನಾಯರ್ ಭಾಗವಹಿಸುವರು ಎಂದು ಪ್ರಕಾಶ ಮದ್ದಿನ ಪ್ರಕಟಣೆಗೆ ತಿಳಿಸಿದ್ದಾರೆ.

# PM ಮೋದಿ ಬಡವರ ಪರ ಇದ್ದಾರೆ ಎನ್ನುವುದಕ್ಕೆ GST ಸರಳೀಕರಣವೇ ಸಾಕ್ಷಿ : ಮಹೇಶ್ ಟೆಂಗಿನಕಾಯಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

PM ಮೋದಿ ಬಡವರಪರ ಇದ್ದಾರೆ ಎನ್ನುವುದಕ್ಕೆ ಉಖಖಿ ಸರಳೀಕರಣವೇ ಸಾಕ್ಷಿ ಎಂದು ಮಹೇಶ್ ಟೆಂಗಿನಕಾಯಿ ಹೇಳಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ಜಿಎಸ್‌ಟಿ ಸರಳೀಕರಣ ಮಾಡಿ ಮೋದಿ ಸರ್ಕಾರ ದೇಶದ ಜನರಿಗೆ ಮೋದಿ ಸರ್ಕಾರ ದಸರಾ, ದೀಪಾವಳಿ ಉಡುಗೊರೆ ಕೊಟ್ಟಿದೆ. ಕ್ಯಾನ್ಸರ್ ಔಷಧಿಗಳ ಮೇಲೆ ಟ್ಯಾಕ್ಸ್ ರದ್ದು ಮಾಡಿದ್ದಾರೆ.

ಕೃಷಿ, ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಜಿಎಸ್‌ಟಿ ಇಳಿಸುವ ಕೆಲಸ ಮಾಡಿ, ದೊಡ್ಡ ಕೊಡುಗೆ ಕೊಟ್ಟಿದ್ದಾರೆ. ನಿರ್ಮಲಾ ಸೀತಾರಾಮನ್, ಮೋದಿ ಅವರಿಗೆ ಧನ್ಯವಾದ ಹೇಳ್ತೀನಿ.

# ಜಿಲ್ಲೆಯ 18 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸೆಪ್ಟಂಬರ್ 5 ರಂದು ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗಾಗಿ ಪ್ರಾಥಮಿಕ/ ಪ್ರೌಢಶಾಲಾ ವಿಭಾಗಗಳಿಂದ ಒಟ್ಟು ಜಿಲ್ಲೆಯಿಂದ 18 ಪ್ರಸ್ತಾವನೆಗಳನ್ನು ಆಯ್ಕೆ ಮಾಡಿ, ಆಯ್ಕೆಗೊಂಡ ಪ್ರಶಸ್ತಿ ಪುರಸ್ಕೃತ ಶಿಕ್ಷಕರ ಮಾಹಿತಿ ಈ ಕೆಳಗಿನಂತೆ ಇದೆ.

ಗದಗ ಶಹರ – ಶ್ರೀಮತಿ ವಹೀದಾಬೇಗಂ ಹ ಕೆಲೇವಾಲೆ, ಸರಕಾರಿ ಹಿರಿಯ ಪ್ರಾಥಮಿಕ ಉರ್ದು ಗಂಡು ಮಕ್ಕಳ ಶಾಲೆ ನಂ-05 ; ಗದಗ ಶಹರ – ಶ್ರೀಮತಿ ಪದ್ಮಾವತಿ ಆರ್ ಕರಮಡಿ, ಸರಕಾರಿ ಕಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆ ನಂ-07 ಬೆಟಗೇರಿ ; ಗದಗ ಶಹರ- ಶಿವಪ್ಪ ಮ ಕೋರಿ ಶಾಸ್ತ್ರಿಜಿ ಪ್ರೌಢ ಶಾಲೆ; ಗದಗ ಗ್ರಾಮೀಣ- ಎಫ್.ಎಸ್. ಗಾಣಿಗೇರ, ಸ.ಕಿ.ಪ್ರಾಥಮಿಕ ಶಾಲೆ ನಭಾಪುರ; ಗದಗ ಗ್ರಾಮೀಣ -ಸಿ ಎಸ್ ತೋಟಪ್ಪನವರ, ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕಣಗಿನಹಾಳ; ಗದಗ ಗ್ರಾಮೀಣ- ಶಂಭುಲಿಂಗಪ್ಪ ಹನುಮಪ್ಪ ಶೆಟ್ಟಿನಾಯಕರ, ಸರಕಾರಿ ಬಾಲಕಿಯರ ಪ್ರೌಢ ಶಾಲೆ ಲಕ್ಕುಂಡಿ ; ಮುಂಡರಗಿ ತಾಲೂಕು- ಲಚಮಪ್ಪ ರಾಮಚಂದ್ರಪ್ಪ ಪವಾರ, ಸರಕಾರಿ ಮಾದರಿ ಕೇಂದ್ರ ಶಾಲೆ ಶಿವಾಜಿನಗರ ; ಮುಂಡರಗಿ ತಾಲೂಕು – ಶ್ರೀಮತಿ ಎಂ.ಎಸ್. ಕರ್ಜಗಿ, ಜಿ.ಎಚ್.ಪಿ.ಎಸ್. ಕಪ್ಪತ್ತಗಿರಿ; ಮುಂಡರಗಿ ತಾಲೂಕು – ಎಂ ಎಸ್ ಶೀರನಹಳ್ಳಿ ಸರಕಾರಿ ಉರ್ದು ಪ್ರೌಢ ಶಾಲೆ ಮುಂಡರಗಿ; ನರಗುಂದ ತಾಲೂಕು – ಶ್ರೀಮತಿ ದಾವಲಬಿ ಬುಡ್ಡೆಸಾಬ ತಾಣೆದ ಸರಕಾರಿ ಕಿರಿಯ ಉರ್ದು ಪ್ರಾಥಮಿಕ ಶಾಲೆ, ಸಂಕದಾಳ ; ನರಗುಂದ ತಾಲೂಕು- ಜಿ.ಎಫ್.ಬಳಗೇರ, ಸರಕಾರಿ ಮಾದರಿ ಪ್ರಾಥಮಿಕ ಶಾಲೆಂ-02 ನರಗುಂದ ; ನರಗುಂದ ತಾಲೂಕು- ಉಮೇಶ ಎಂ ವಿ.ಎನ್.ಪಾಟೀಲ ಸರಕಾರಿ ಪ್ರೌಢ ಶಾಲೆ. ಕುರ್ಲಗೇರಿ ತಾ:ನರಗುಂದ; ರೋಣ ತಾಲೂಕು- ಶ್ರೀಮತಿ ಶೈಲಶ್ರೀ ಯ ಕುರಟ್ಟಿ, ಎಸ್. ಆರ್.ಪಾಟೀಲ ಸರಕಾರಿ ಬಾಲಕರ ಕೇಂದ್ರ ಶಾಲೆ ರೋಣ; ರೋಣ ತಾಲೂಕು- ಶ್ರೀಮತಿ ಅಕ್ಕಮ್ಮ ಶಿವಬಸಪ್ಪ ನರಗುಂದ, ಸರಕಾರಿ ಹಿ.ಪ್ರಾ.ಶಾಲೆ.ಪುರ್ತಗೇರಿ, ತಾ: ಗಜೇಂದ್ರಗಡ ; ರೋಣ ತಾಲೂಕು- ಶ್ರೀಮತಿ ಎನ್ ಎನ್ ಕ್ಯಾತನಗೌಡ್ರ , ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುದೇನಗುಡಿ ; ಶಿರಹಟ್ಟಿ ತಾಲೂಕು – ಶ್ರೀಮತಿ ಜಯಲಕ್ಷ್ಮಿ ಎಸ್ ಗುಡಗೇರಿ, ಪಿ.ಎಂ.ಶ್ರೀ.ಸ.ಮಾ.ಪ್ರಾ.ಶಾಲೆ ನಂ-04 ಲಕ್ಷ್ಮೇಶ್ವರ, ಶಿರಹಟ್ಟಿ ತಾಲೂಕು- ಬಸವರಾಜ ಹನಮಪ್ಪ ಮಾನೇಗಾರ, ಉನ್ನತೀಕರಿಸಿದ ಸ.ಹಿ.ಪ್ರಾ.ಶಾಲೆ ವಡವಿ-ಹೊಸೂರ ; ಶಿರಹಟ್ಟಿ ತಾಲೂಕು – ಅಶೋಕ ಹನಮಪ್ಪ ಇಚ್ಚಂಗಿ, ಕರ್ನಾಟಕ ಪಬ್ಲಿಕ್ ಸ್ಕೂಲ್, ಬೆಳ್ಳಟ್ಟಿ ತಾ:ಶಿರಹಟ್ಟಿ,

# ಧ್ಯಾನ ಪರಿಚಯ, ಸತ್ಸಂಗ ಸೆ.7ಕ್ಕೆ

■ ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಇಲ್ಲಿನ ಎಸ್.ಎಸ್.ಕೆ ಸಮಾಜ ಹಾಗೂ ಪಿರಮಿಡ್ ಸ್ಪಿರಿಚುವಲ್ ಸೊಸೈಟಿ ಗದಗ ಇವರ ಸಹಯೋಗದೊಂದಿಗೆ ಸೆ.7ರಂದು ಸಂಜೆ 5 ಗಂಟೆಗೆ ಬೆಟಗೇರಿಯ ಅಂಬಾ ಭವಾನಿ ದೇವಸ್ಥಾನದಲ್ಲಿರುವ ಶ್ರೀಮತಿ ಮುನ್ನುಬಾಯಿ ಈಶ್ವರಸಾ ಖೋಡೆ ಕಲ್ಯಾಣ ಮಂಟಪದಲ್ಲಿ ಧ್ಯಾನ ಪರಿಚಯ ಹಾಗೂ ಸತ್ಸಂಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಧ್ಯಾನ ವಿಸ್ತಾರಕರಾದ ಶ್ರೀ ಸುರೇಶ ಕಲಬುರ್ಗಿ (ಸಿಇಓ ಮತ್ತು ಡೈರೆಕ್ಟರ್ ಸಿಟಿಡಿಐ ಇಂಡಿಯಾ ಪ್ರೈ.ಲಿ) ಇವರು ಆಗಮಿಸಲಿದ್ದು, ಪ್ರಸಕ್ತ ದಿನಮಾನದಲ್ಲಿ ಧ್ಯಾನದ ಮಹತ್ವ ಹಾಗೂ ಉಪಯುಕ್ತತೆಯ ಕುರಿತು ಮಾಹಿತಿ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಧ್ಯಾನದ ಉಪಯುಕ್ತತೆಯಿಂದ ರೋಗಮುಕ್ತರಾಗಿ ಆರೋಗ್ಯಪೂರ್ಣ ಜೀವನ ಕುರಿತು, ಒತ್ತಡ ರಹಿತ ಮನಸ್ಥಿತಿ, ವಿದ್ಯಾರ್ಥಿಗಳ ನೆನಪಿನ ಶಕ್ತಿ ವೃದ್ಧಿ, ದೈಹಿಕ, ಮಾನಸಿಕ ಆರೋಗ್ಯ ಹಾಗೂ ಸಂತೋಷದ ಜೀವನ ಹೊಂದುವ ಕುರಿತಾಗಿ ಚರ್ಚಿಸಲಿದ್ದಾರೆ. ಈ ಮಹತ್ವದ ಕಾರ್ಯಕ್ರಮಕ್ಕೆ ಆಸಕ್ತರು ತಮ್ಮ ಕುಟುಂಬ ಸದಸ್ಯರೊಂದಿಗೆ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಪ್ರಕಟಣೆ ವಿನಂತಿಸಿದೆ.

# ಸಹಜತೆಯಿಂದ ಬಾಳುವುದು ಜಾಣತನ




■ ವಿಜಯಸಾಕ್ಷಿ ಸುದ್ದಿ, ಗದಗ

ಇಚ್ಛೆಗಳನ್ನು ನಿಯಂತ್ರಿಸಿಕೊಂಡು ಮನುಷ್ಯ ಜನ್ಮವನ್ನು ವ್ರತ-ನಿಯಮಾದಿಗಳ ಪಾಲನೆಯ ಮೂಲಕ ಸತ್ಫಲಗೊಳಿಸುವುದೇ ಉತ್ತಮ ತಪವಾಗಿದ್ದು, ಇದ್ದುದರಲ್ಲಿ ಇದ್ದದ್ದನ್ನು ಅನುಭವಿಸುವುದು ಅಂದರೆ ಸಹಜತೆಯಿಂದ ಬಾಳುವುದು ಜಾಣತನವಾಗಿದೆ ಎಂದು ರಂಜಿತಾ ಮೇಲಾಣಿ ಹೇಳಿದರು.

ಅವರು ಗದಗ ಜಿಲ್ಲಾ ದಿಗಂಬರ ಜೈನ ಸಂಘವು 'ದಶಲಕ್ಷಣ ಪರ್ವಾಚರಣೆ ಮತ್ತು ಸಮಾಜ ಸಂಪರ್ಕ ಸಭೆ' ನಿಮಿತ್ತ ಸೊರಟೂರದ ಶಾಂತಿನಾಥ ಬಸದಿಯ ಸಭಾಭವನದಲ್ಲಿ ಆಯೋಜಿಸಿದ್ದ 'ಉತ್ತಮ ತಪಧರ್ಮ' ಕುರಿತು ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕೆ.ಎನ್. ಮಲ್ಲಾಡದ ಮಾತನಾಡಿ, ನಮ್ಮ ನಾಡಿನ ಅನೇಕ ಮಹಾಪುರುಷರು, ಮಹನೀಯರು ಉನ್ನತೋನ್ನತವಾದ ಪದವಿಗಳಿದ್ದರೂ ಅದನ್ನು ಇಚ್ಛಿಸದೇ ತೃಣಕ್ಕೆ ಸಮಾನವೆಂದು ಭಾವಿಸಿ, ಉತ್ತಮ ತಪದ ಮೂಲಕ ಇಂದಿಗೂ ಸ್ಮರಣೀಯರಾಗಿದ್ದಾರೆಂದು ಹೇಳಿದರು.

ಸಂಘದ ಅಧ್ಯಕ್ಷ ಪಿ.ಎ. ಕುಲಕರ್ಣಿ ಮಾತನಾಡಿ, ಇಚ್ಛೆಗಳನ್ನು ನಿಯಂತ್ರಿಸಿಕೊಳ್ಳಲು ಮಹಾಪುರುಷರಷ್ಟೇ ಸಮರ್ಥರಲ್ಲ. ಉತ್ತಮ ಸಂಸ್ಕಾರಗಳನ್ನು ಮೈಗೂಡಿಸಿಕೊಂಡು 'ಬದುಕು, ಬದುಕಲು ಬಿಡು', 'ಪರಸ್ಪರೋಪಗ್ರಹೋ ಜೀವಾನಂ' ತತ್ವಗಳಿಗೆ ಬದ್ಧವಾಗಿ ಬಾಳಿದರೆ ಸಾಮಾನ್ಯರಿಂದಲೂ ಸಾಧ್ಯವಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಯಶವಂತ ಸಿದ್ದಣ್ಣವರ, ಪ್ರಕಾಶ ಮುತ್ತಿನ, ಶಿವಪ್ಪ ಹೋಳಗಿ, ಧರ್ಮಣ್ಣ ಹೊಸೂರ, ಚಂದ್ರಪ್ಪ ಮಲ್ಲಾಡದ, ಹನಮಂತಪ್ಪ ಬೆಂತೂರ, ಅಭಿನಂದನ ಬೆಂತೂರ ಸೇರಿದಂತೆ ಸ್ಥಳೀಯ ಶ್ರಾವಕ-ಶ್ರಾವಿಕೆಯರು ಭಾಗವಹಿಸಿದ್ದರು.

# ಜಯಲಕ್ಷ್ಮೀ ಗುಡಗೇರಿಗೆ ಜಿಲ್ಲಾ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಪಿಎಂಶ್ರೀ ಸರಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆ ನಂ.4ರಲ್ಲಿ ಸಹ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವ ಜಯಲಕ್ಷ್ಮೀ ಶಿವಪ್ಪ ಗುಡಗೇರಿ ಗದಗ ಜಿಲ್ಲಾ ಶಿಕ್ಷಣ ಇಲಾಖೆಯ 'ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕಿ' ಪ್ರಶಸ್ತಿಗೆ ಭಾಜನರಾಗಿದ್ದಾರೆ.




1995ರಲ್ಲಿ ಸೇವೆಗೆ ಸೇರಿದ ಜಯಲಕ್ಷ್ಮೀ ಗುಡಗೇರಿ ಅವರು ತಮ್ಮ ಪ್ರಾಮಾಣಿಕ ಶಿಕ್ಷಣ ಸೇವೆಯಿಂದ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಪ್ರಸ್ತುತ ತಾಲೂಕಿನ ಸೇವಾದಳದ ಅಧಿನಾಯಕಿಯಾಗಿ, ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮದ ಮುಂದಾಳತ್ವವನ್ನು ಕೂಡ ವಹಿಸಿ ಮಕ್ಕಳೆಲ್ಲರ ಅಚ್ಚುಮೆಚ್ಚಿನ ಶಿಕ್ಷಕಿಯಾಗಿದ್ದಾರೆ. 2015ರಿಂದ 2020ರ ಅವಧಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಹಿಳಾ ಉಪಾಧ್ಯಕ್ಷರಾಗಿ ಸೇವೆ ಮಾಡಿದ್ದಾರೆ. ವಿಶೇಷವೆಂದರೆ, ಇವರು ಇದೇ ಶಾಲೆಯಲ್ಲಿ ವಿದ್ಯಾರ್ಥಿಯಾಗಿ ಶಿಕ್ಷಣ ಪಡೆದು ಅದೇ ಶಾಲೆಗೆ ಶಿಕ್ಷಕಿಯಾಗಿ ನೇಮಕಗೊಂಡಿದ್ದಲ್ಲದೇ 30 ವರ್ಷಗಳ ಕಾಲ ಇದೇ ಶಾಲೆಯಲ್ಲಿ ಸೇವೆ ಸಲ್ಲಿಸಿ ಮುಂದಿನ 9 ತಿಂಗಳಲ್ಲಿ ನಿವೃತ್ತಿ ಹೊಂದಲಿದ್ದಾರೆ.

ಗದಗ ಜಿಲ್ಲಾ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾದ ಇವರಿಗೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಮುಖ್ಯೋಪಾಧ್ಯಾಯರು, ಶಿಕ್ಷಕವೃಂದ, ವಿದ್ಯಾರ್ಥಿ ಬಳಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಪ್ರಾಚ್ಯ ಪ್ರಜ್ಞೆ ಸ್ಪರ್ಧೆಯ ಫಲಿತಾಂಶ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಲಕ್ಷ್ಮೇಶ್ವರದ ಐತಿಹಾಸಿಕ ಶಂಖಬಸದಿಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾದ ತಾಲೂಕು ಮಟ್ಟದ ಪ್ರಾಚ್ಯ ಪ್ರಜ್ಞೆ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು. ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕುಗಳ 23 ಪ್ರೌಢಶಾಲೆಗಳ ಸುಮಾರು ನೂರಕ್ಕೂ ಅಧಿಕ ವಿದ್ಯಾರ್ಥಿಗಳು ಉತ್ಸಾಹದಿಂದ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.



**ಪ್ರಬಂಧ ಸ್ಪರ್ಧೆ:** ಮಹೇಶ ಏಳುಮಗ್ಗದ-ಮೊರಾರ್ಜಿ ದೇಸಾಯಿ ವಸತಿ ಶಾಲೆ, ಗೊಜನೂರ (ಪ್ರಥಮ), ಶ್ರದ್ಧಾ ಈರಡ್ಡಿ-ಸರಕಾರಿ ಪ್ರೌಢಶಾಲೆ ಮಾಡಳ್ಳಿ (ದ್ವಿತೀಯ), ಭಾಗ್ಯ ಮೇಟಿ ಎಸ್.ಜೆ.ಹೆಚ್.ಎಸ್ ಬನ್ನಿಕೊಪ್ಪ (ತೃತೀಯ)

**ಭಾಷಣ ಸ್ಪರ್ಧೆ:** ವೀಣಾ ವಡ್ಡರ- ಕೆ.ಪಿ.ಎಸ್ ಬೆಳ್ಳಟ್ಟಿ (ಪ್ರಥಮ), ಭಾಗ್ಯ ಮಾಳೆ- ಎಫ್‌ಎಂ. ಡಬಾಲಿ ಹೈಸ್ಕೂಲ್ ಶಿರಹಟ್ಟಿ (ದ್ವಿತೀಯ), ಹರ್ಷಿತಾ ಅಕ್ಕೂರ-ಸರಕಾರಿ ಪ್ರೌಢಶಾಲೆ, ಯಲ್ಲಾಪುರ(ತೃತೀಯ)

**ಚಿತ್ರಕಲೆ ಸ್ಪರ್ಧೆ:** ಉಮೇಶ ಪೂಜಾರ ಮೊರಾರ್ಜಿ ದೇಸಾಯಿ ವ.ಶಾಲೆ-ಒಡೆಯರ ಮಲ್ಲಾಪೂರ(ಪ್ರಥಮ), ದಿವ್ಯಾ ಅಡರಕಟ್ಟಿ-ಕಿತ್ತೂರು ಚೆನ್ನಮ್ಮ ವಸತಿ ಶಾಲೆ,ಶಿರಹಟ್ಟಿ (ದ್ವಿತೀಯ), ಪವಿತ್ರಾ ಕಿತ್ತೂರ-ಸರಕಾರಿ ಪ್ರೌಢಶಾಲೆ, ಮಾಡಳ್ಳಿ (ತೃತೀಯ)

**ರಸಪ್ರಶ್ನೆ ಸ್ಪರ್ಧೆ :** ನೀಲನಗೌಡ ಪಾಟೀಲ ಹಾಗೂ ವಿಕಾಸ ಮಜ್ಜಿಗುಡ್ಡ-ಸರಕಾರಿ ಪ್ರೌಢಶಾಲೆ, ಮಾಡಳ್ಳಿ (ಪ್ರಥಮ), ಕಾರ್ತಿಕ ದೇಸಾಯಿ ಹಾಗೂ ಭುವನರಾಜ ಈಳಿಗೇರ-ಮೊರಾರ್ಜಿ ದೇಸಾಯಿ ವ.ಶಾಲೆ, ಗೊಜನೂರ (ದ್ವಿತೀಯ), ಬಸವರಾಜ ಶೆಟ್ಟಿಕೇರಿ ಹಾಗೂ ಭೀಮಪ್ಪ ಹಾದಿಮನಿ-ಸರಕಾರಿ ಪ್ರೌಢಶಾಲೆ, ಮಜ್ಜೂರ (ತೃತೀಯ) ಸ್ಥಾನ ಪಡೆದುಕೊಂಡರು.

### ಬಾಲ ನ್ಯಾಯ ಕಾಯ್ದೆಯಡಿ ಮಕ್ಕಳ ರಕ್ಷಣೆ, ಪಾಲನೆ-ಪೋಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ; ಡಾ. ದುರಗೇಶ

# ಬಾಲಮಂದಿರಗಳ ವಾಸ್ತವಾಂಶ ಅರಿಯಿರಿ




■ ವಿಜಯಸಾಕ್ಷಿ ಸುದ್ದಿ, ಗದಗ

ಅನಾಥ, ಏಕ ಪಾಲಕ, ಭಿಕ್ಷಾಟನೆ ಮಾಡುತ್ತಿದ್ದ ಮಕ್ಕಳನ್ನು ದೈವಾಂಶ ಮಕ್ಕಳೆಂದು ತಿಳಿದು ಅವರ ಪಾಲನೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ದುರಗೇಶ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಸಭಾಭವನದಲ್ಲಿ ಗುರುವಾರ ಜರುಗಿದ ಮಕ್ಕಳ ರಕ್ಷಣೆ ಮತ್ತು ಪಾಲನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳ ರಕ್ಷಣೆ ಮತ್ತ ಪಾಲನೆಗೆ ನೇಮಿಸಿದ ಸಮಿತಿಯು ಪ್ರತಿ ತಿಂಗಳು ಸಂಬಂಧಿಸಿದ ಬಾಲಂಮದಿರಗಳಿಗೆ ಭೇಟಿ ನೀಡಿ ಅಲ್ಲಿನ ವಾಸ್ತವ ಸ್ಥಿತಿಯನ್ನು ತಿಳಿದುಕೊಳ್ಳಬೇಕು. ಅಲ್ಲಿರುವ ಕುಂದು-ಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಬೇಕು ಮತ್ತು ಅಲ್ಲಿರುವ ಮಕ್ಕಳ ಬೇಡಿಕೆಗಳನ್ನು ತಿಳಿಯಬೇಕು. ಇಂತಹ ಸಂದರ್ಭದಲ್ಲಿ ಎಲ್ಲರ ಪಾಲ್ಗೊಳುವಿಕೆ ಅತ್ಯವಶ್ಯಕವಾಗಿದೆ. ಸಮಾಜದಲ್ಲಿರುವ ಮಕ್ಕಳ ಭವಿಷ್ಯವನ್ನು ನಿರ್ಮಾಣ ಮಾಡಲು ದೊರೆತ ಅವಕಾಶ ಎಂದು ಭಾವಿಸಿ ಎಲ್ಲರೂ ಕಾರ್ಯ ಮಾಡಬೇಕು. ಜಿಲ್ಲಾಡಳಿತದಿಂದ ಬಾಲಮಂದಿರದಲ್ಲಿರುವ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಅನುಕೂಲ ಕಲ್ಪಿಸಲಾಗುತ್ತದೆ ಮತ್ತು ಕಿತ್ತೂರು ಚನ್ನಮ್ಮ, ಮೊರಾರ್ಜಿ ದೇಸಾಯಿಯಂತಹ ಶಾಲೆಗಳಲ್ಲಿ ಪ್ರಮುಖ್ಯತೆ ನೀಡಲಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಮಕ್ಕಳ ರಕ್ಷಣಾಧಿಕಾರಿ ರಫೀಕಾ ಹಳ್ಳೂರ ಮಾತನಾಡಿ, ಜಿಲ್ಲೆಯಲಿರುವ ಸರ್ಕಾರಿ ಮತ್ತು ಖಾಸಗಿ ಬಾಲಮಂದಿರ ಅಂಕಿ-ಅಂಶ ನೀಡಿದರಲ್ಲದೆ, ಸರ್ಕಾರಿ ಬಾಲ ಮಂದಿರ ನಿರ್ಮಾಣಕ್ಕೆ ಬೇಕಾದ ಅನುದಾನಕ್ಕೆ ಈಗಾಗಲೇ ಸರ್ಕಾರಕ್ಕೆ ಮನವಿ ಕಳುಹಿಸಲಾಗಿದೆ ಎಂದು ತಿಳಿಸಿದರು.

ಸಭೆಗೆ ಆಗಮಿಸಿದ ಬಾಲಮಂದಿರದ ಮುಖ್ಯಸ್ಥರು ಬಾಲಮಂದಿರದಲ್ಲಿರುವ ಮಕ್ಕಳ ಮಾಹಿತಿಯನ್ನು ಸಭೆಗೆ ತಿಳಿಸಿದರು. ಸಭೆಯಲ್ಲಿ ಬಾಲಂಮದಿರದ ಮುಖ್ಯಸ್ಥರು, ಬಾಲ ಮಕ್ಕಳ ರಕ್ಷಣೆ ಮತ್ತು ಪಾಲನಾ ಸಮಿತಿಯ ಸದಸ್ಯರು ಹಾಜರಿದ್ದರು.

ಬಾಲಮಂದಿರದಲ್ಲಿರುವ ಮಕ್ಕಳ ಪಾಲನೆಯನ್ನು ಚೆನ್ನಾಗಿ ಮಾಡವುದು ನಮ್ಮೆಲ್ಲರ ಆದ್ಯ ಕರ್ತವ್ಯ ವಾಗಿದೆ. ಸಮಿತಿಯಲ್ಲಿರುವ ಸರ್ವ ಸದಸ್ಯರು ಜೆ.ಜೆ ಆ್ಯಕ್ಟ್ ಕುರಿತು ಸಮಗ್ರವಾಗಿ ತಿಳಿದುಕೊಳ್ಳಬೇಕು.

ಅಂದಾಗ ಸಮಿತಿಯಿಂದ ಉತ್ತಮ ಕಾರ್ಯ ಕೈಗೊಂಡು ಮಕ್ಕಳನ್ನು ರಕ್ಷಿಸಿ ಪಾಲನೆ ಮಾಡಬಹುದಾಗಿದೆ. ಬಾಲಮಂದಿರದಲ್ಲಿ ಕೆಲವು ಮಕ್ಕಳು ಅತಿಯಾಗಿ ತುಂಟತನ, ಚೇಷ್ಟೆ ಮಾಡುತ್ತಿರುತ್ತಾರೆ. ಅಂಥವರನ್ನು ಗಮನಿಸಿ ಅವರನ್ನು ಬೇರೆ ಕೆಲಸಗಳಲ್ಲಿ ತೊಡುಗುವಂತೆ ಮಾಡಬೇಕು ಎಂದು ಡಾ. ದುರಗೇಶ ತಿಳಿಸಿದರು.

# ರಕ್ತದಾನ ಎಲ್ಲ ದಾನಗಳಿಗಿಂತ ಶ್ರೇಷ್ಠ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಸೂರಣಗಿ ಗ್ರಾಮದ ನವಚೇತನ ಯುವಕ ಮಂಡಳದ 21ನೇ ವರ್ಷದ ಗಣೇಶೋತ್ಸವದ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ 9ನೇ ವರ್ಷದ ರಕ್ತದಾನ ಶಿಬಿರ ಯಶಸ್ವಿಯಾಗಿ ನೆರವೇರಿತು.

ಸಾನ್ನಿಧ್ಯ ವಹಿಸಿದ್ದ ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ಮಾತನಾಡಿ, ಎಲ್ಲ ದಾನಗಳಿಗಿಂತ ರಕ್ತದಾನ ಶ್ರೇಷ್ಠ. ನಾವು ಮಾಡುವ ರಕ್ತದಾನದಿಂದ ಮತ್ತೊಂದು ಅಮೂಲ್ಯವಾದ ಜೀವ ಉಳಿಯುತ್ತದೆ. ರಕ್ತದ ಅಗತ್ಯ ಇರುವಾಗ ನಾವು ದಾನವಾಗಿ ಕೊಟ್ಟ ರಕ್ತ ಅವರನ್ನು ಬದುಕಿಸುತ್ತದೆ. ಈ ನಿಟ್ಟಿನಲ್ಲಿ ಸೂರಣಗಿ ಗ್ರಾಮದ ನವಚೇತನ ಯುವಕ ಸಂಘದ ಸದಸ್ಯರು ಪ್ರತಿವರ್ಷ ನಡೆಸಿಕೊಂಡು ಬರುತ್ತಿರುವ ರಕ್ತದಾನ ಶಿಬಿರ ನೂರಾರು ಜನರನ್ನು ಬದುಕಿಸಿದ್ದು ಒಂದು ಉತ್ತಮ ಕಾರ್ಯ ಎಂದರು.

ವೈದ್ಯ ಬಿ.ಜಿ. ಅಂಗಡಿ ಶಿಬಿರ ಉದ್ಘಾಟಿಸಿದರು. ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲದ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ, ಗಂಗಾಧರ ಮೆಣಸಿನಕಾಯಿ ಮಾತನಾಡಿದರು. ಈ ಸಂದರ್ಭದಲ್ಲಿ ಈರಪ್ಪ ಶೀರನಹಳ್ಳಿ, ಶಂಕರಯ್ಯ ಹಿರೇಮಠ, ಚನ್ನಬಸಪ್ಪ ಶೀರನಹಳ್ಳಿ, ಸಿದ್ದಯ್ಯ ಮಾದಾಪುರಮಠ, ಹುಸೇನಸಾಬ್ ಕೋಲ್ಕಾರ, ವೀರೇಶ ಕಳ್ಳಿಹಾಳ, ಶೇಖಣ್ಣ ಪೂಜಾರ, ವೈದ್ಯರಾದ ಚಂದ್ರಶೇಖರ ಹೊಸಳ್ಳಿಮಠ, ಅಕ್ಷತಾ ಎನ್, ವಿಷ್ಣುಕುಮಾರ್, ಕಾವ್ಯ ಸಂಗಣ್ಣವರ, ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾ ರಕ್ತನಿಧಿ ಕೇಂದ್ರದ ಸಿಬ್ಬಂದಿ, ಸೂರಣಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಗ್ರಾಮದ ಸರ್ವ ಯುವಕ ಮಂಡಲಗಳ ಸದಸ್ಯರುಗಳು, ನವಚೇತನ ಯುವಕ ಮಂಡಳದ ಸದಸ್ಯರು ಇದ್ದರು.

ಬಸವರಾಜ ದುರ್ಗದ ಸ್ವಾಗತಿಸಿದರು. ನಾಗರಾಜ ಪೂಜಾರ ನಿರೂಪಿಸಿದರು. ಈ ವರ್ಷದ ರಕ್ತದಾನ ಶಿಬಿರದಲ್ಲಿ ಮಹಿಳೆಯರಾದ ಹೇಮಾ ಸಂಬಣ್ಣ ಮೂಲಿಮನಿ, ಕಸ್ತೂರವ್ವ ಮೂಲಿಮನಿ, ಜ್ಯೋತಿ ಸಾಸಲವಾಡ ರಕ್ತದಾನ ಮಾಡಿದ್ದು ವಿಶೇಷವಾಗಿತ್ತು.

## ಜನತೆಗೆ ನವರಾತ್ರಿ ಉಡುಗೊರೆ ಜಿಎಸ್‌ಟಿ-2.0



■ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ಜನತೆಗೆ ಕೇಂದ್ರ ಸರ್ಕಾರ ನವರಾತ್ರಿ ಉಡುಗೊರೆ ನೀಡಿದೆ. ಮಧ್ಯಮ ವರ್ಗಕ್ಕೆ ಆರ್ಥಿಕ ನಿರಾಳತೆ ಒದಗಿಸುವ ಮಹತ್ವಾಕಾಂಕ್ಷೆಯಿಂದ ಜಿಎಸ್‌ಟಿ ವ್ಯವಸ್ಥೆಯನ್ನು ಸರಳೀಕರಣಗೊಳಿಸಿದ ಕೇಂದ್ರ ಸರ್ಕಾರದ ನಡೆ ವ್ಯಾಪಾರಸ್ಥರಿಗೆ, ಮಧ್ಯಮ ವರ್ಗದವರಿಗೆ ನೀಡಿದ ಕೊಡುಗೆಯಾಗಿದೆ ಎಂದು ಬಿಜೆಪಿ ಗದಗ ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರುಡಗಿ ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಧಾನಿ ನರೇಂದ್ರ ಮೋದಿರವರು ದೀಪಾವಳಿಗೆ ಜಿಎಸ್‌ಟಿ ಗಿಫ್ಟ್ ನೀಡುವುದಾಗಿ ಘೋಷಿಸಿದ್ದರೂ ಬುಧವಾರ ಆರಂಭಗೊಂಡ 2 ದಿನಗಳ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಹಾಲಿ ಇದ್ದ 4 ಸ್ಲ್ಯಾಬ್‌ಗಳನ್ನು 2ಕ್ಕೆ ಇಳಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಅದರನ್ವಯ ಶೇ 5, ಶೇ 8 ಸ್ಲ್ಯಾಬ್ ಮಾತ್ರ ಉಳಿದುಕೊಳ್ಳಲಿದೆ. ಜೀವವಿಮೆ, ಆರೋಗ್ಯ ವಿಮೆಯನ್ನು ಶೂನ್ಯ ತೆರಿಗೆ ವ್ಯಾಪ್ತಿಗೆ ತರುವ ಮೂಲಕ ಕೋಟ್ಯಾಂತರ ಜನರಿಗೆ ಅನುಕೂಲ ಮಾಡಿಕೊಡಲಾಗಿದೆ. ಹೊಸ ತೆರಿಗೆ ಪದ್ಧತಿ ಸೆ. 22ರಿಂದಲೇ ದೇಶದಲ್ಲಿ ಅನುಷ್ಠಾನಗೊಳ್ಳಲಿದೆ. ಎಂದು ರಾಜು ಕುರುಡಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## ಸೆ.7ರಂದು ನಾರಾಯಣ ಗುರು ಜಯಂತಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜಯಂತಿಯನ್ನು ಸೆಪ್ಟೆಂಬರ್ 7 ರಂದು ಸಂಜೆ 4 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಆಚರಿಸಲಾಗುವುದು.

ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ ಕಾರ್ಯಕ್ರಮದಲ್ಲಿ ಘನ ಉಪಸ್ಥಿತಿ ವಹಿಸುವರು. ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ ಸಂಸದರಾದ ಬಸವರಾಜ ಬೊಮ್ಮಾಯಿ, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಕರ್ನಾಟಕ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್.ಪಾಟೀಲ, ಸಂಸದ ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ್ ಶೆಟ್ಟರ್, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕಬರಸಾಬ ಬಬರ್ಚಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಬಿ.ಅಸೂಟಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಕರ್ನಾಟಕ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಡಾ.ವೆಂಕಟೇಶ್ ಎಂ.ವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಶ್ರೀಮತಿ ಕೆ.ಎಂ.ಗಾಯತ್ರಿ ಆಗಮಿಸಲಿದ್ದಾರೆ. ಪರಶುರಾಮ ಈಳಗೇರ ಉಪನ್ಯಾಸ ನೀಡಲಿದ್ದಾರೆ. ಗದಗ ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಮುಖ್ಯಕಾರ್ಯನಿರ್ವಹಣಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಬಸವರಾಜ ಬಳ್ಳಾರಿ ಸ್ವಾಗತಿಸಿದ್ದಾರೆ.

## ಕಂಟ್ರ್ಯಾಕ್ಟರ್ ಬಳಿ ಲಂಚಕ್ಕೆ ಬೇಡಿಕೆ: 'ಲೋಕಾ' ಬಲೆಗೆ ಬಿದ್ದ ಬೆಸ್ಕಾಂನ ಇಇ!

■ವಿಜಯಸಾಕ್ಷಿ ಸುದ್ದಿ, ಚಿತ್ರದುರ್ಗ

ಕಂಟ್ರ್ಯಾಕ್ಟರ್ ಬಳಿ ಲಂಚ ಸ್ವೀಕರಿಸುತ್ತಿದ್ದ ಚಿತ್ರದುರ್ಗದ ಬೆಸ್ಕಾಂ ನ ಇ ಇ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿರುವ ಘಟನೆ ಜರುಗಿದೆ. ತಿಮ್ಮರಾಯಪ್ಪ ಲೋಕಾ ಬಲೆಗೆ ಬಿದ್ದ ಚಿತ್ರದುರ್ಗದ ಬೆಸ್ಕಾಂ ನ ಇ ಇ. ಇವರು ಬೆಸ್ಕಾಂ ಕಂಟ್ರ್ಯಾಕ್ಟರ್ ಬಳಿ 35 ಲಕ್ಷದ ಟೆಂಡರ್ ಗೆ 10% ಪರ್ಸೆಂಟ್ ರಂತೆ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅದರಂತೆ 3.5 ಲಕ್ಷ ಹಣ ಸ್ವೀಕರಿಸುವಾಗ ರೆಡ್ ಹ್ಯಾಂಡ್ ಆಗಿ ಲೋಕಾ ಬಲೆಗೆ ಬಿದ್ದಿದ್ದಾರೆ.

### ರೋಣ, ಗಜೇಂದ್ರಗಡ ತಾಲೂಕುಗಳಲ್ಲಿ ಮುಂಗಾರು ಬೆಳೆ ಹಾನಿ ವೀಕ್ಷಿಸಿದ ರಾಜ್ಯ ತಂಡ

# ರೈತರಿಗೆ ಶೀಘ್ರವೇ ಪರಿಹಾರ ಒದಗಿಸಿ

■ವಿಜಯಸಾಕ್ಷಿ ಸುದ್ದಿ, ರೋಣ

ನಿರಂತರ ಮಳೆಯಿಂದ ರೋಣ ಮತ್ತು ಗಜೇಂದ್ರಗಡ ತಾಲೂಕಿನಲ್ಲಿ ಮುಂಗಾರು ಹಂಗಾಮಿನ ಬೆಳೆಗಳು ಸಂಪೂರ್ಣ ಹಾನಿಗೊಳಗಾಗಿದ್ದು, ರಾಜ್ಯ ತಂಡ ಎರಡೂ ತಾಲೂಕುಗಳಲ್ಲಿ ಸಂಚರಿಸಿ, ಬೆಳೆಹಾನಿ ಪ್ರಮಾಣವನ್ನು ವೀಕ್ಷಿಸಿ ರೈತರಿಂದ ಅಗತ್ಯ ಮಾಹಿತಿ ಪಡೆದುಕೊಂಡಿತು.

ಗುರುವಾರ ರೋಣ ತಾಲೂಕಿನ ಅಬ್ಬಿಗೇರಿ, ರೋಣ, ಬಾಸಾಲಾಪೂರ, ಕೊತಬಾಳ, ಹಿರೇಹಾಳ, ಹೊಸಳ್ಳಿ ಮತ್ತು ಗಜೇಂದ್ರಗಡ ತಾಲೂಕಿನ ನಿಡಗುಂದಿ, ಸೂಡಿ, ನರೆಗಲ್ಲ ಗ್ರಾಮಗಳ ಜಮೀನುಗಳಿಗೆ ತೆರಳಿ ಅಪಾರ ಮಳೆಯಿಂದ ಆಗಿರುವ ನಷ್ಟವನ್ನು ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿತು.

ಅಬ್ಬಿಗೇರಿ ಹಾಗೂ ರೋಣ ಪಟ್ಟಣದ ಸಾರಿಗೆ ಘಟಕದ ಬಳಿ ಮುಂಗಾರು ಬೆಳೆಯಾದ ಹೆಸರು



ವೀಕ್ಷಿಸಿದ ಅಧಿಕಾರಿಗಳ ತಂಡ, ನಂತರ ಬಾಸಾಲಾಪೂರ ಗ್ರಾಮಕ್ಕೆ ತೆರಳಿತು. ಅಲ್ಲಿ ಸಂಜಯ ನಾಡಗೌಡ ಎಂಬ ರೈತರು ತಮ್ಮ ಜಮೀನಿನಲ್ಲಿ 18 ಎಕರೆ 19 ಗುಂಟೆಯಲ್ಲಿ ಬೆಳೆದ ಹೆಸರು ಬೆಳೆಯನ್ನು ಕಟಾವು ಮಾಡದೆ ಹಾಗೆಯೇ ಬಿಟ್ಟಿದ್ದರು. ಇದನ್ನು ವೀಕ್ಷಿಸಿದ ಪ್ರಕೃತಿ ವಿಕೋಪ ತಂಡದ ಅಧಿಕಾರಿಗಳು ಕೃಷಿ ಇಲಾಖೆಯ ಅಧಿಕಾರಿಗಳನ್ನು ಪ್ರಶ್ನಿಸಿದರು. ಆಗ ತಹಸೀಲ್ದಾರ ನಾಗರಾಜ ಕೆ ಸೇರಿದಂತೆ ಕೃಷಿ ಇಲಾಖೆ ಅಧಿಕಾರಿಗಳು ಬೆಳೆಯನ್ನು ಕಟಾವು ಮಾಡಿದರೂ ಸಹ ರೈತರಿಗೆ ಉಪಯೋಗವಿಲ್ಲ. ಹೀಗಾಗಿ ಬಿಟ್ಟಿದ್ದಾರೆ ಎಂದು ವಿವರಿಸಿದರು.

ರೋಣ, ಗಜೇಂದ್ರಗಡ ತಾಲೂಕಿನಲ್ಲಿ ಮುಂಗಾರು ಹಂಗಾಮಿನ ಎಲ್ಲ ಬೆಳೆಗಳು ವಿಪರೀತ ಮಳೆಯಿಂದ ಹಾನಿಗೊಳಗಾಗಿದ್ದು, ರೈತರು ತೀವ್ರ ಸಂಕಷ್ಟದ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಅಲ್ಲದೆ ಈರುಳ್ಳಿ, ಮೆಣಸಿನಕಾಯಿ, ಮೆಕ್ಕೆಜೋಳ, ಶೇಂಗಾ ಸೇರಿದಂತೆ ಇತರೆ ಬೆಳೆಗಳು ಸಹ ತೇವಾಂಶ ಹೆಚ್ಚಳದಿಂದ ಹಳದಿ ರೋಗಕ್ಕೆ ತಿರುಗಿಕೊಂಡಿವೆ. ಇದರಿಂದ ಇಳುವರಿ ಕುಂಠಿತಗೊಳ್ಳಲಿದ್ದು, ಶೀಘ್ರವೇ ವರದಿ ಸಲ್ಲಿಸಿ ರೈತರಿಗೆ ಪರಿಹಾರ ಒದಗಿಸಬೇಕು ಎಂದು ಪ್ರಕೃತಿ ವಿಕೋಪ ತಂಡದ ಜಂಟಿ ನಿರ್ದೇಶಕ ಆರ್.ವಿ. ಮಂಜುನಾಥರಿಗೆ ರೈತರು ಮನವಿ ಮಾಡಿದರು. ತಹಸೀಲ್ದಾರ ನಾಗರಾಜ ಕೆ, ಕೃಷಿ ಇಲಾಖೆಯ ಉಪ ಜಂಟಿ ನಿರ್ದೇಶಕ ಫಾಲಾಕ್ಷಗೌಡ, ಸಹಾಯಕ ನಿರ್ದೇಶಕ ಎಸ್. ಎಫ್. ತಹಸೀಲ್ದಾರ್, ತೋಟಗಾರಿಕೆ ಸಹಾಯಕ ನಿರ್ದೇಶಕ ಗಿರೀಶ ಹೊಸೂರ, ಶಿವಪುತ್ರಪ್ಪ ದೊಡ್ಡಮನಿ, ಜಾಫರ ಹವಾಲ್ದಾರ, ಓಲೇಕಾರ, ಕುಂಬಾರ ಸೇರಿಂತೆ ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

> ನಿರಂತರ ಮಳೆಯಿಂದ ರೋಣ, ಗಜೇಂದ್ರಗಡ ತಾಲೂಕಿನಲ್ಲಿ ಮುಂಗಾರು ಹಂಗಾಮಿನ ಎಲ್ಲ ಬೆಳೆಗಳು ಹಾನಿಗೊಳಗಾಗಿದ್ದು, ನಾನು ಸ್ವತಃ ಅಧಿಕಾರಿಗಳ ಸಭೆ ನಡೆಸಿ ಜಂಟಿ ಸಮೀಕ್ಷೆ ನಡೆಸುವ ಮೂಲಕ ವರದಿ ಸಲ್ಲಿಸಿ ಎಂದು ತಿಳಿಸಿದ್ದೆ. ಇದೀಗ ರಾಜ್ಯ ತಂಡ ಎರಡೂ ತಾಲೂಕಿನಲ್ಲಿ ಬೆಳೆ ಹಾನಿ ಪ್ರಮಾಣವನ್ನು ವೀಕ್ಷಣೆ ಮಾಡಿದೆ. ನಿರಂತರ ಮಳೆಯಿಂದ ಹಾನಿಗೊಳಗಾದ ರೈತರಿಗೆ ಶೀಘ್ರ ಪರಿಹಾರ ದೊರೆಯಬೇಕು ಎಂಬುದು ನನ್ನ ಮುಖ್ಯ ಉದ್ದೇಶ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು.
>
> – ಜಿ.ಎಸ್. ಪಾಟೀಲ. ಶಾಸಕರು, ರೋಣ.

## ಸಂಚಾರಿ ಇ- ಚಾನೆಲ್ ನಲ್ಲಿ ದಂಡ ಮೊತ್ತದಲ್ಲಿ ಶೇ 50 ರಷ್ಟು ರಿಯಾಯತಿ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರವು ಪೊಲೀಸ್ ಇಲಾಖೆಯ ಸಂಚಾರಿ ಇ- ಚಾನೆಲ್ ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣದ ದಂಡದ ಮೊತ್ತದಲ್ಲಿ ಸೇ 50 ರಷ್ಟು ರಿಯಾಯತಿ ನೀಡಿ ಆದೇಶಿಸಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಿ.ಎಸ್. ಶಿವನಗೌಡ್ರ ತಿಳಿಸಿದ್ದಾರೆ.


ಸೆಪ್ಟೆಂಬರ್ –11 ರವರೆಗೆ ಈ ರಿಯಾಯತಿ ಸೌಲಭ್ಯವು ಇರಲಿದ್ದು, ಸೆಪ್ಟೆಂಬರ್ 13 ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್ ಪ್ರಯುಕ್ತ ಈ ರಿಯಾಯತಿ ನೀಡಲಾಗಿದೆ. ಹಾಗಾಗಿ ಸಾರ್ವಜನಿಕರು ಈ ಸೌಲಭ್ಯವನ್ನು ಸದ್ಭಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## 'ಗುರುಶ್ರೀ' ಪ್ರಶಸ್ತಿ ಪ್ರದಾನ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಶಿಕ್ಷಣ ಪ್ರೇಮಿ, ತ್ಯಾಗಜೀವಿ ಶ್ರೀ ಬಿ.ಜಿ. ಅಣ್ಣಿಗೇರಿ ಗುರುಗಳ ಪ್ರತಿಭಾ ಪ್ರತಿಷ್ಠಾನ ಗದಗ, ಅಣ್ಣಿಗೇರಿ ಗುರುಗಳ 6ನೇ ಪುಣ್ಯಸ್ಮರಣೆ ಮತ್ತು ವಾರ್ಷಿಕ ಸರ್ವಸಾಧಾರಣ ಸಭೆ ಹಾಗೂ 'ಗುರುಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ಸೆ. 5ರಂದು ಮಧ್ಯಾಹ್ನ 3 ಗಂಟೆಗೆ ಗದುಗಿನ ಶ್ರೀ ಬಿ.ಜಿ.ಅಣ್ಣಿಗೇರಿ ಗುರುಗಳ ಆಶ್ರಮದಲ್ಲಿ ಜರುಗಲಿದೆ.

ಸಾನ್ನಿಧ್ಯವನ್ನು ಜ. ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ವಹಿಸುವರು. ಗದುಗಿನ ಸಂಸ್ಕೃತ ವಿದ್ವಾನ್ ಎನ್.ಎನ್. ಭಟ್ ಅವರಿಗೆ 'ಗುರುಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವದು. ಮುಖ್ಯ ಅತಿಥಿಗಳಾಗಿ ಡಾ. ಅರವಿಂದ ಕರಿನಾಗಣ್ಣವರ, ನಿವೃತ್ತ ಪ್ರಾಚಾರ್ಯ



ಎಸ್.ಬಿ. ಹಿರೇಮಠ, ಶ್ರೀನಿವಾಸ ಸುರೇಬಾನ, ಡಾ. ಐ.ಬಿ. ಕೊಟ್ಟೂರಶೆಟ್ಟಿ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಶಿವಕುಮಾರ ಎಚ್.ಪಾಟೀಲ ಆಗಮಿಸುವರು. ಪ್ರತಿಷ್ಠಾನದ ಸರ್ವ ಪದಾಧಿಕಾರಿಗಳು, ನಿರ್ದೇಶಕರು ಉಪಸ್ಥಿತರಿರುವರು ಎಂದು ಕಾರ್ಯದರ್ಶಿ ಸುಭಾಸಚಂದ್ರ ಬೆಟದೂರ ತಿಳಿಸಿದ್ದಾರೆ.

## ಕ್ರಿಯಾಶೀಲ ಶಿಕ್ಷಕ ಈಶ್ವರ ಮೆಡ್ಲೇರಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿಕ್ಷಕರೋರ್ವರು ಕ್ರಿಯಾಶೀಲ ಶಿಕ್ಷಕ, ಸಾಹಿತಿ, ಸಂಘಟಕ, ವಾಗ್ಮಿ, ನಿರೂಪಕ ಸೇರಿ ಇನ್ನೂ ಹಲವು ಆಯಾಮಗಳಲ್ಲಿ ಸೇವೆ ಸಲ್ಲಿಸಬಹುದು ಎಂಬುದಕ್ಕೆ ಲಕ್ಷ್ಮೇಶ್ವರದ ಈಶ್ವರ ಮೆಡ್ಲೇರಿ ಉತ್ತಮ ಉದಾಹರಣೆಯಾಗಿದ್ದಾರೆ.

ಪಟ್ಟಣದಲ್ಲಿ ಸಂಘಟನೆ ವಿಷಯದಲ್ಲಿ ಮುಖ್ಯವಾಗಿ ಕೇಳಿ ಬರುವ ಹೆಸರು ಈಶ್ವರ ಮೇಡ್ಲೇರಿ ಶಿಕ್ಷಕರದ್ದಾಗಿದೆ. ತಮ್ಮ ಶಿಕ್ಷಕ ವೃತ್ತಿಯಲ್ಲಿ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸುತ್ತಿರುವ ಇವರು ಶಿಕ್ಷಣ ಇಲಾಖೆಯ ಸಮೂಹ ಸಂಪನ್ಮೂಲ ವ್ಯಕ್ತಿಯಾಗಿ ಅಷ್ಟೇ ನಿಷ್ಠೆಯಿಂದ ತೊಡಗಿಸಿಕೊಂಡಿರುವದು ವಿಶೇಷವಾಗಿದೆ. ಇಲ್ಲಿ ಈಶ್ವರ ಓರ್ವ ಶಿಕ್ಷಕ ಮಾತ್ರ ಎನ್ನುವದು ಮುಖ್ಯವಲ್ಲ, ಇವರು ಉಪನ್ಯಾಸಕ್ಕೆ ನಿಂತರೆ ನಿರರ್ಗಳವಾಗಿ ಗಂಟೆಗಟ್ಟಲೆ ಆ ವಿಷಯಕ್ಕೆ ಸಂಬಂಧಿಸಿದಂತೆ



ಉಪನ್ಯಾಸವನ್ನು ನೀಡುವ ಶ್ರೇಷ್ಠ ವಾಗ್ಮಿಯಾಗಿದ್ದಾರೆ.

ಈಗಾಗಲೆ ಸಾಹಿತ್ಯಿಕವಾಗಿ ಹಲವಾರು ಪುಸ್ತಕಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಇವರು ಪಟ್ಟಣದ ಐತಿಹಾಸಿಕ ಸ್ಥಳದ ಮಹತ್ವದ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದು, ಸಂಪೂರ್ಣ ಇತಿಹಾಸವನ್ನು ವಿವರಿಸುತ್ತಾರೆ. ಹಲವು ವರ್ಷಗಳಿಂದ ತಾಲೂಕಿನಲ್ಲಿನ ಬಿಆರ್‌ಸಿಯಾಗಿ ಸೇವೆ ಸಲ್ಲಿಸುವುದರೊಂದಿಗೆ ತಾಲೂಕಿನ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳ ನೇತೃತ್ವವೂ ಇವರದ್ದೇ ಆಗಿರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷರಾಗಿ ಇವರು ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳು ಇಂದು ರಾಜ್ಯಮಟ್ಟದಲ್ಲಿ ಗಮನ ಸೆಳೆಯುತ್ತಿರುವದು ವಿಶೇಷವಾಗಿದೆ.

ಶಿಕ್ಷಣ ಇಲಾಖೆಯ ಯಾವುದೇ ಕೆಲಸಗಳಿರಲಿ, ಎಲ್ಲ ಶಿಕ್ಷಕರನ್ನು ಸೇರಿಸಿ ಸಂಘಟಿಸಿ ಇಲಾಖೆಯೊಂದಿಗೆ ಅವುಗಳನ್ನು ಸರಳವಾಗಿ ಮಾಡುವದರಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ. ಈಗಾಗಲೇ ಜಿಲ್ಲೆ, ತಾಲೂಕು ಹಾಗೂ ಸ್ಥಳೀಯ ಮಟ್ಟದಲ್ಲಿ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಈಶ್ವರ ಮೆಡ್ಲೇರಿ, ಶಿಕ್ಷಕ ವೃತ್ತಿ ದೊರೆಕಿರುವದು ನನ್ನ ಪೂರ್ವಜನ್ಮದ ಪುಣ್ಯ. ಮಕ್ಕಳಿಗೆ ಶಿಕ್ಷಕರಾದ ನಾವು ಉತ್ತಮ ದಾರಿ ತೋರಿಸಿಕೊಡುವ ಕಾರ್ಯ ಮಾಡಿ, ಅವರನ್ನು ಸತ್ಪ್ರಜೆಯನ್ನಾಗಿ ಮಾಡುವ ಮೂಲಕ ದೇಶ ಕಟ್ಟುವ ಕಾರ್ಯಕ್ಕೆ ಕೈಜೋಡಿದಂತಾಗುತ್ತದೆ ಎನ್ನುತ್ತಾರೆ.

### ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ, ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ

## ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ, ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭವನ್ನು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸೆ.5ರಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು. ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್. ಕೆ. ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಸರ್ಕಾರಿ ಮುಖ್ಯ ಸಚೇತಕ ಹಾಗೂ ವಿ.ಪ ಸದಸ್ಯ ಸಲೀಂ ಅಹ್ಮದ್, ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ರೋಣ ಶಾಸಕರಾದ ಜಿ.ಎಸ್. ಪಾಟೀಲ, ಸಂಸದ ಪಿ.ಸಿ. ಗದ್ದಿಗೌಡರ, ವಿ.ಪ ಸದಸ್ಯ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕ ಸಿ.ಸಿ. ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕಬರಸಾಬ ಬಬರ್ಚಿ, ಜಿಲ್ಲಾ ಮಟ್ಟದ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ ಆಗಮಿಸುವರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಆಡಳಿತ) ಆರ್.ಎಸ್. ಬುರಡಿ, ಡಯಟ್‌ದ ಉಪನಿರ್ದೇಶಕಿ(ಅಭಿವೃದ್ಧಿ) ಮಂಗಳಾ ತಾಪಸ್ಕರ್, ಗದಗ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಯ್ಯ ಸಿ.ಕೊರವನವರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಬಿ. ಮಸನಾಯಕ, ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ನಡುವಿನಮನಿ, ಗದಗ ತಹಸೀಲ್ದಾರರಾದ ಶ್ರೀನಿವಾಸ ಮೂರ್ತಿ ಕುಲಕರ್ಣಿ, ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ವಿ. ಶೆಟ್ಟೆಪ್ಪನವರ ಸರ್ವರಿಗೂ ಸ್ವಾಗತ ಕೋರಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು, ವಿವಿಧ ಶಿಕ್ಷಕರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

> ವಿಶೇಷ ಆಹ್ವಾನಿತರಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ ಮಹೇಶ್, ಕರ್ನಾಟಕ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಎಸ್‌ಪಿ ರೋಹನ್ ಜಗದೀಶ್ ಆಗಮಿಸಲಿದ್ದಾರೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಉಪನಿರ್ದೇಶಕ ಡಾ. ಹರಿಪ್ರಸಾದ್ ಜಿ.ವಿ ಉಪನ್ಯಾಸ ನೀಡಲಿದ್ದಾರೆ.

### ತಾಲೂಕು ಮಟ್ಟದ ಪ್ರಾಚ್ಯ ಪ್ರಜ್ಞೆ ಸ್ಪರ್ಧಾ ಕಾರ್ಯಕ್ರಮ ಉದ್ಘಾಟಿಸಿದ ಬಸವರಾಜ ಓದುನವರ

# ಸ್ಮಾರಕಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ



> ಪ್ರಾಚ್ಯ ಪ್ರಜ್ಞೆ ವಿಷಯದ ಮೇಲೆ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆಗಳಿಗಾಗಿ ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕುಗಳ 23 ಪ್ರೌಢಶಾಲೆಗಳ ಸುಮಾರು ನೂರಕ್ಕೂ ಅಧಿಕ ವಿದ್ಯಾರ್ಥಿಗಳು 1500 ವರ್ಷಗಳ ಇತಿಹಾಸ ಇರುವ ಪ್ರಾಚೀನ ಸ್ಮಾರಕ ಶಂಖಬಸದಿ ಸುತ್ತಮುತ್ತ ಅಭಿಮಾನದಿಂದ ಸ್ಪರ್ಧಿಸಿ ಸಂಭ್ರಮಿಸಿದರು.

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನಮ್ಮ ರಾಷ್ಟ್ರದ ಶ್ರೇಷ್ಠ, ಶ್ರೀಮಂತ ಪರಂಪರೆಯನ್ನು ಪ್ರಾಚ್ಯ ಸ್ಮಾರಕಗಳು ಇಂದಿಗೂ ಪ್ರತಿಬಿಂಬಿಸುತ್ತಿವೆ. ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಕ್ಕಳಿಗೆ ಪ್ರಾಚೀನ ಪರಂಪರೆಯ ಬಗ್ಗೆ ಮಾಹಿತಿ ನೀಡುವದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಪುರಸಭಾ ಸದಸ್ಯ ಬಸವರಾಜ ಓದುನವರ ಅಭಿಪ್ರಾಯಪಟ್ಟರು.

ಅವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಲಕ್ಷ್ಮೇಶ್ವರದ ಐತಿಹಾಸಿಕ ಶಂಖಬಸದಿಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ತಾಲೂಕು ಮಟ್ಟದ ಪ್ರಾಚ್ಯ ಪ್ರಜ್ಞೆ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ನಮ್ಮ ಶ್ರೇಷ್ಠ ಪ್ರಾಚ್ಯ ಪರಂಪರೆಯನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯಬೇಕಾಗಿದೆ. ಅದನ್ನು ಶಿಕ್ಷಣ ಇಲಾಖೆ ಇಂತಹ ಕಾರ್ಯಕ್ರಮಗಳ ಮುಖಾಂತರ ಹಮ್ಮಿಕೊಂಡಿರುವುದು ಸ್ತುತ್ಯಾರ್ಹ ಎಂದರು.

ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಸ್.ಕೆ. ಹವಾಲ್ದಾರ್ ಮಾತನಾಡಿ, ನಾಲ್ಕು ಗೋಡೆಯ ಮಧ್ಯೆ ಶಿಕ್ಷಣ ಸೀಮಿತವಾಗಬಾರದು. ಜೊತೆಗೆ ಇಂತಹ ಪ್ರಾಚೀನ ಪರಂಪರೆಯನ್ನು ಅರಿಯುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಲ್ಲಿ ಮಕ್ಕಳಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬಹುದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನೋಡಲ್ ಬಿ.ಆರ್.ಪಿ ಈಶ್ವರ ಮೆಡ್ಲೇರಿ, 6ನೇ ಶತಮಾನದಲ್ಲಿಯೇ ನಿರ್ಮಾಣವಾದ ಶಂಖಬಸದಿಯು ಪುಲಿಗೆರೆ ಸೋಮನಾಥ ದೇವಸ್ಥಾನದಂತೆಯೇ ಅತ್ಯಂತ ಹಳೆಯ ಇತಿಹಾಸ ಹೊಂದಿದೆ. ಇಂತಹ ಪ್ರಾಚೀನ ಸ್ಮಾರಕದಲ್ಲಿ ಪ್ರಾಚ್ಯ ಪ್ರಜ್ಞೆ ಸ್ಪರ್ಧೆ ಏರ್ಪಡಿಸುವ ಮೂಲಕ ಮಕ್ಕಳಲ್ಲಿ ನಮ್ಮ ಪ್ರಾಚೀನತೆಯ ಹಿರಿಮೆಯನ್ನು ಜಾಗೃತಗೊಳಿಸುವುದು ಇಲಾಖೆಯ ಉದ್ದೇಶವಾಗಿದೆ. ಜೊತೆಗೆ ತಾಲೂಕಿನ ವಿದ್ಯಾರ್ಥಿಗಳು ಪ್ರತಿ ವರ್ಷ ರಾಜ್ಯಮಟ್ಟಕ್ಕೆ ಆಯ್ಕೆಯಾಗುತ್ತಿರುವುದು ಅಭಿಮಾನದ ವಿಷಯವಾಗಿದೆ ಎಂದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶಂಖಬಸದಿ ಟ್ರಸ್ಟ್‌ನ ಕಾರ್ಯದರ್ಶಿ ಮಹಾವೀರಗೌಡ ಪಾಟೀಲ, ಅಧ್ಯಕ್ಷತೆ ವಹಿಸಿದ್ದ ಪುರಸಭೆಯ ಅಧ್ಯಕ್ಷೆ ಯಲ್ಲವ್ವ ದುರಗಣ್ಣವರ, ವಿಶ್ರಾಂತ ಶಿಕ್ಷಕ ಸಿ.ಜಿ. ಹಿರೇಮಠ, ಶಿಕ್ಷಕ ಎಚ್. ಎಂ. ಗುತ್ತಲ ಮಾತನಾಡಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿ ಎ.ಎಂ. ಅಕ್ಕಿ, ಜೈನ ಸಮಾಜದ ವಾಸು ಪಾಟೀಲ ವೇದಿಕೆಯಲ್ಲಿದ್ದರು.

ಸ್ಪರ್ಧೆಯ ನಿರ್ಣಾಯಕರಾಗಿ ಸಿ.ಜಿ. ಹಿರೇಮಠ, ನಾಗರಾಜ ಮಜ್ಜಿಗುಡ್ಡ, ಸಿಆರ್‌ಪಿಗಳಾದ ನವೀನ ಅಂಗಡಿ, ಗಿರೀಶ್ ನೇಕಾರ, ಸತೀಶ ಬೋಮಲೆ, ಉಮೇಶ ನೇಕಾರ, ಚಂದ್ರಶೇಖರ ವಡಕಣ್ಣವರ, ಎನ್. ಎನ್. ಸಾವಿರಕುರಿ, ಕೆ.ಪಿ. ಕಂಬಳಿ, ಜ್ಯೋತಿ ಆಗಮಿಸಿದ್ದರು.

ಸಂಗಮೇಶ ಅಂಗಡಿ ವಂದಿಸಿದರು. ಶಂಖಬಸದಿ ಟ್ರಸ್ಟ್ ಕಮಿಟಿಯ ನಂದಕುಮಾರ ಪಾಟೀಲ, ಸುನಿಲ ಕುಮಾರ ಪಾಟೀಲ, ಪ್ರಕಾಶ ಪಾಟೀಲ ಹಾಗೂ ವಿವಿಧ ಪ್ರೌಢಶಾಲೆಗಳ ಮಾರ್ಗದರ್ಶಿ ಶಿಕ್ಷಕರು ಪಾಲ್ಗೊಂಡಿದ್ದರು.

## ಬಾಳಿನ ಭಾಗ್ಯೋದಯಕ್ಕೆ ಧರ್ಮವೇ ಬೆಳಕು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮೀಪದ ಶಿಗ್ಲಿ ಗ್ರಾಮದ ಧಾರ್ಮಿಕ ಮುಖಂಡ ವೀರಣ್ಣ ಪವಾಡದ ಅವರ ನಿವಾಸದಲ್ಲಿ ಭಕ್ತ-ರಿಂದ ಬುಧವಾರ ಕೊಟ್ಟೂರು ಕ್ಷೇತ್ರದ ಶ್ರೀ ಶಿವಪ್ರಕಾಶ ಮಹಾಸ್ವಾಮಿಗಳ ಪಾದಪೂಜೆಯನ್ನು ಶ್ರದ್ಧೆಯಿಂದ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಶಿವಪ್ರಕಾಶ ಸ್ವಾಮಿಗಳು ಆಶೀರ್ವಚನ ನೀಡಿ, ಭಾರತದ ಉಸಿರು ಧರ್ಮ ಮತ್ತು ಭಾವೈಕ್ಯತೆ, ರಾಷ್ಟ್ರಪ್ರೇಮ, ಧರ್ಮನಿಷ್ಠೆ, ಕರ್ತವ್ಯಶೀಲತೆ ಪ್ರತಿಯೊಬ್ಬರ ಉಸಿರಾಗಲಿ. ಗೋಮಾತೆ, ಭೂಮಾತೆ, ರಾಷ್ಟ್ರಮಾತೆ ಇವು ನಮ್ಮ ಸಂಸ್ಕೃತಿಯ ಅಮೂಲ್ಯ ಸಂಪತ್ತುಗಳಾಗಿವೆ. ಸ್ವಾಭಿಮಾನದಿಂದ ನಾಡು–ನುಡಿ ಶ್ರೀಮಂತಗೊಳ್ಳಲು ಸಾಧ್ಯ. ಪ್ರೀತಿ, ವಾತ್ಸಲ್ಯ, ಸಹನೆ, ಕರುಣೆ, ಪರೋಪಕಾರಗಳು ಧರ್ಮದ ಪ್ರಮುಖ ತತ್ವಗಳು.

ಬಾಳೆಂಬ ಕಾಯಿಯನ್ನು ಹಣ್ಣಾಗಿಸಿಕೊಂಡು ಫಲಪ್ರಾಪ್ತಿಗೊಳಿಸಿಕೊಳ್ಳುವುದೇ ಮನುಷ್ಯ ಧರ್ಮ. ಬಾಳಿನ ಭಾಗ್ಯೋದಯಕ್ಕೆ ಧರ್ಮದ ಬೆಳಕು ಬೇಕು. ಯಾವಾಗಲೂ ನಾಶವಾಗದೇ ಇರುವುದು ಧರ್ಮ, ಇದನ್ನು ನಾಶ ಮಾಡುವ ಶಕ್ತಿ ಯಾರಿಗೂ, ಯಾವ ಕಾಲಕ್ಕೂ ಇರುವುದಿಲ್ಲ ಎಂದು ನುಡಿದರು.

ಈರಣ್ಣ ಪವಾಡದ, ನಿರ್ಮಲದೇವಿ ಪವಾಡದ, ಲಾವಣ್ಯ ಪವಾಡದ, ವೀರಸೋಮೇಶ್ವರ, ಚೇತನ ಹಿರೇಮಠ, ನಾಗಪ್ಪ ತಂಬ್ರಳ್ಳಿ, ಕಲ್ಲಯ್ಯ ಪೂಜಾರ್, ರಮೇಶ ಅಣ್ಣಿಗೇರಿ, ವಿಷ್ಣಪ್ಪ ಅಸುಂಡಿ, ಬಸವನಗೌಡ ಪಾಟೀಲ್ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka